# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI





ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 11 Reg. No. : KARBIL / 2005 / 16123 ಫೆಬ್ರವರಿ - 2022 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ 2 ಪ್ರಕಟಣೆ : 12-02-2022


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಬೆಳ್ಳೆ 'ದಾಸ ಕೃಪಾ' ಮನೆಯಲ್ಲಿ ನಡೆದ ಆಶ್ಲೇಷ ಬಲಿ ಧಾರ್ಮಿಕ ಕಾರ್ಯಕ್ರಮದಲ್ಲಿ ಶ್ರೀಮತಿ ಶಾರದಾ ಸದಾನಂದ ರಾವ್ ಮತ್ತು ಮಕ್ಕಳು ಬೆಳ್ಳೆ ಸದಾನಂದ ರಾವ್ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವ ಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 5,55,555/- ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭದಲ್ಲಿ ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಉಪಸ್ಥಿತರಿದ್ದರು.

ಕಾವೂರು ನಿವಾಸಿ ಕೇಂದ್ರೀಯ ವಿದ್ಯಾಲಯದ ನಿವೃತ್ತ ಮುಖ್ಯೋಪಾಧ್ಯಾಯರಾದ ಚಿತ್ರಾಪುರ ಶ್ರೀ ಸೀತಾರಾಮ ರಾವ್ ಮತ್ತು ಶ್ರೀಮತಿ ಕೆ. ಕಮಲಾಕ್ಷಿ ಬಾಯಿ (ತಮ್ಮ ಹೆತ್ತವರಾದ ನಾರಾವಿ ಮಲ್ಲಿಕಾರ್ಜುನಯ್ಯ ಮತ್ತು ಲಕ್ಷ್ಮಿಯಮ್ಮ ಸ್ಮರಣಾರ್ಥ) ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ 1,00,000/- ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭದಲ್ಲಿ ಅವರ ಸುಪುತ್ರ ಶ್ರೀ ರವಿಕಿರಣ್, ಸೊಸೆ ಶ್ರೀಮತಿ ಸಾವಿತ್ರಿ, ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್, ಶ್ರೀ ಸಂತೋಷ್ ಯು. ಉಪಸ್ಥಿತರಿದ್ದರು.



## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿದ್ಯಾನಿಧಿ ಸ್ಥಾಪನೆ



ಡಾ| ಬಿ. ಎಚ್. ಕೃಷ್ಣಮೂರ್ತಿ ರಾವ್, ಡಾ| ಬಿ. ಎಚ್. ಆನಂದ್ ರಾವ್ ಮತ್ತು ಡಾ| ಬಿ. ಎಚ್. ಶ್ರೀಪತಿ ರಾವ್ ತಮ್ಮ ಹೆತ್ತವರಾದ ಪಂಡಿತ್ ವಾಸುದೇವಯ್ಯ ಮತ್ತು ಶ್ರೀಮತಿ ಮಹಾಲಕ್ಷ್ಮಿ ಅಮ್ಮನವರ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ರೂ. 1,50,000/-ಗಳ ವಿದ್ಯಾನಿಧಿಯನ್ನು ಸ್ಥಾಪಿಸಿದ್ದು, ಅವರನ್ನು ಶ್ರೀ ಸಭಾದ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಜೊತೆಕಾರ್ಯದರ್ಶಿಗಳಾದ ಶ್ರೀ ಅನಿಲ್ ರಾವ್, ಶ್ರೀ ಚೇತನ್ ಶರ್ಮ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್, ಶ್ರೀಮತಿ ಕನಕವಲ್ಲಿ, ಡಾ| ದೀಪಕ್ ರಾವ್, ಶ್ರೀ ಗಿರೀಶ್ ರಾವ್, ಡಾ| ಸಂದೀಪ್ ಉಪಸ್ಥಿತರಿದ್ದರು.

ಶ್ರೀಮತಿ ಸ್ನೇಹಲತಾ ಮತ್ತು ಡಾ| ದಿವಾಕರ ರಾವ್ ತಮ್ಮ ಹೆತ್ತವರಾದ ಸಾಂತೂರ್ ಜನಾರ್ದನಯ್ಯ ಮತ್ತು ಶ್ರೀಮತಿ ಜಲಜಾರವರ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸ್ಥಾಪಿಸಿರುವ ವಿದ್ಯಾನಿಧಿಗೆ ರೂ. 40,000/- ನೀಡಿ ನಿಧಿಯನ್ನು ರೂ. 1,30,000/-ಕ್ಕೆ ಹೆಚ್ಚಿಸಿದ್ದಾರೆ. ಈ ಸಂದರ್ಭದಲ್ಲಿ ಅವರ ಮಗ ಶ್ರೀ ಅಮರದೀಪ್, ಸೊಸೆ ತನುಜ, ಮೊಮ್ಮಗ ಶ್ರೀ ಅರ್ಪಿತ್ ಶರ್ಮ; ಶ್ರೀಮತಿ ಸ್ನೇಹಾ ಶರ್ಮ ಉಪಸ್ಥಿತರಿದ್ದರು. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ.

ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಚಿತ್ರ : ಶ್ರೀ ರಘುವೀರ್ ಪೆರ್ಡೂರು

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು 'ಸ್ಕೋಲರ್ಸ್ ಡೇ - 2021'

ಭಾನುವಾರ 27 ಫೆಬ್ರವರಿ 2022

ಬೆಳಗ್ಗೆ ಗಂಟೆ 8-30ರಿಂದ 10-15 : ಉಪಾಹಾರ ಮತ್ತು ನೋಂದಾವಣೆ • ಬೆಳಗ್ಗೆ ಗಂಟೆ 10-30ರಿಂದ 11-00 : ಉದ್ಘಾಟನಾ ಕಾರ್ಯಕ್ರಮ

ದೀಪ ಪ್ರಜ್ವಲನೆ, ಸ್ವಾಗತ ಭಾಷಣ : ಡಾ| ಎ. ಪಿ. ಕೃಷ್ಣ    ಅಧ್ಯಕ್ಷರ ಮಾತು : ಶ್ರೀ ಹರ್ಷಕುಮಾರ್ ಕೇದಿಗೆ

**SESSION I** ಬೆಳಗ್ಗೆ ಗಂಟೆ 11-00ರಿಂದ 11-30

'ಯೋಗ ಮತ್ತು ನ್ಯಾಚುರೋಪತಿ ಮೂಲಕ ವ್ಯಕ್ತಿತ್ವ ವಿಕಸನ'
'Personality Development through Yoga & Naturopathy'
ಡಾ| ರಾಜೇಶ್ ಪಾದೇಕಲ್
ಪ್ರಾಂಶುಪಾಲರು, ಶಾರದಾ ಯೋಗ ಮತ್ತು ನ್ಯಾಚುರೋಪತಿ ಮೆಡಿಕಲ್ ಕಾಲೇಜು, ಮಂಗಳೂರು

**SESSION II** ಮಧ್ಯಾಹ್ನ ಗಂಟೆ 11-30ರಿಂದ 12-00

'ಮನಸ್ಸಿನ ಧೋರಣೆ ನಾವು ಹೇಗೆ ಜೀವಿಸಬೇಕು ಎಂಬುದನ್ನು ನಿರ್ಧರಿಸುತ್ತದೆ.'
'Attitude determines how we live our life'
ಶ್ರೀ ಪ್ರಸಾದ್ ಬಿ.ಹೆಚ್.ವಿ.
ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಆರ್.ಪಿ.ಎಲ್., ಮಂಗಳೂರು

**ವಿಶೇಷ ಸೂಚನೆ**

- ಕಡ್ಡಾಯವಾಗಿ ಕೋವಿಡ್-19ರ ಮಾನದಂಡವನ್ನು ಪಾಲಿಸತಕ್ಕದ್ದು.
- ಸ್ಕೋಲರ್‌ಶಿಪ್ ಪಡೆಯುವ ವಿದ್ಯಾರ್ಥಿಗಳು ಬೆಳಗ್ಗೆ ಗಂಟೆ 10-15ರ ಒಳಗೆ ತಮ್ಮ ಹೆಸರನ್ನು ಕೌಂಟರ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು.
- ತಡವಾಗಿ ಬಂದ ವಿದ್ಯಾರ್ಥಿಗಳಿಗೆ ಸ್ಕೋಲರ್‌ಶಿಪ್‌ನ್ನು ಕೊಡಲಾಗುವುದಿಲ್ಲ.

ಮಧ್ಯಾಹ್ನ ಗಂಟೆ 12-00ರಿಂದ 12-30 : ಸಮೂಹ ಚರ್ಚೆ    Moderation : ಶ್ರೀ ಇನ್ನಾ ಚಂದ್ರಕಾಂತ ರಾವ್
ಮಧ್ಯಾಹ್ನ ಗಂಟೆ 12-30ರಿಂದ 1-00 : ವಿದ್ಯಾರ್ಥಿ ವೇತನ ವಿತರಣೆ ಮಧ್ಯಾಹ್ನ ಗಂಟೆ 1-00ರಿಂದ 2-00 : ಭೋಜನ

- Personal Invitation is sent to all the eligible students by post.
- For any clarification you may contact Dr. A. P. KRISHNA ✆ : 9845213997

- ಯಾವುದು ಜೀವಿಗಳ ಅತ್ಯಂತ ಹಿತಸಾಧನೆಗೆ ಸಹಕಾರಿಯಾಗುವುದೋ ಅದೇ ಧರ್ಮ ಎನಿಸಿಕೊಳ್ಳುತ್ತದೆ.
- ಶಾಂತನೂ – ಸುಶೀಲನೂ ಆದವನು ವಯಸ್ಸಿನ ಭಾರವನ್ನು ಕಾಣನು. ಹಾಗಿಲ್ಲದವನಿಗೆ ಯೌವನವೂ ಮುಪ್ಪೂ ಎರಡೂ ಒಂದೇ. – ಸುಭಾಷಿತ

**ಜ್ಞಾನಶಕ್ತಿ ಮಾಸ ಪತ್ರಿಕೆ**

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್ ಪುತ್ತೂರು
ಮೊಬೈಲ್ : 9448481696

ಸಂಪಾದಕರು :
ಪಿ. ಶ್ರೀಕಾಂತ ರಾವ್
ಮೊಬೈಲ್ : 9343361618

ಸಂಪಾದಕ ಮಂಡಳಿ :
ನಾಗರಾಜ್ ವರ್ಕಾಡಿ
ರಘುವೀರ್ ಪೆರ್ಡೂರು
ಟಿ. ಬಿ. ಮೋಹನ್ ರಾವ್
ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
ಕರುಣ್ ರಾವ್ ಬೆಳ್ಳೆ
ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು :
ಚೇತನ್ ಶರ್ಮ
ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು :
ಹರ್ಷಕುಮಾರ್ ಕೇದಿಗೆ




## ದಕ್ಷಿಣಾಮ್ನಾಯ ಶೃಂಗಗಿರಿ ಶ್ರೀ ಶಾರದಾಪೀಠದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ

### ಅನುಗ್ರಹ ಸಂದೇಶ

ಭಗವಂತನಲ್ಲಿ ಭಕ್ತಿ, ಧ್ಯಾನ ಮತ್ತು ಪೂಜೆಯನ್ನು ಯಾವ ರೀತಿಯಲ್ಲಿ ಆಚರಿಸಬೇಕು ಎಂಬುದನ್ನು ಶಾಸ್ತ್ರಗಳು ವಿವರಿಸುತ್ತವೆ. ಈ ಮಾರ್ಗದರ್ಶನವನ್ನು ಸ್ವಲ್ಪವಾದರೂ ಪರಿಪಾಲಿಸಿದರೆ ನೆಮ್ಮದಿಯಿಂದ ಜೀವನವನ್ನು ನಡೆಸಬಹುದು.

ಪ್ರತಿನಿತ್ಯವೂ ಸ್ನಾನವಾದ ನಂತರ ಸ್ವಲ್ಪ ಕಾಲ ಭಗವಂತನ ಧ್ಯಾನವನ್ನು ಮಾಡಬೇಕು. ಶ್ರೀಮದ್ ಭಾಗವತ ಅಥವಾ ಗೀತೆಯಿಂದ ಕಡೆಯ ಪಕ್ಷ ಎರಡು ಶ್ಲೋಕಗಳನ್ನಾದರೂ ಪಠಿಸಬೇಕು. ಇದರಿಂದ ಪುಣ್ಯವಲ್ಲದೆ ಮನಸ್ಸಿಗೆ ಶಾಂತಿಯುಂಟಾಗುತ್ತದೆ.

ಈ ರೀತಿಯ ಆಧ್ಯಾತ್ಮಿಕ ಚಟುವಟಿಕೆಯ ಪ್ರಾರಂಭದಿಂದ ಇಡೀ ದಿನವೆಲ್ಲ ಮನಸ್ಸು ಶಾಂತವಾಗಿರುತ್ತದೆ. ಭಗವಂತನು ತನ್ನ ಭಕ್ತರನ್ನು ಎಂದಿಗೂ ಕೈ ಬಿಡುವುದಿಲ್ಲವೆಂದು ತಿಳಿದುಬರುವುದು.

ಈ ರೀತಿಯಿಂದ ಜೀವನವನ್ನು ನಡೆಸುವವರಿಗೆ ಅವರ ಆಧ್ಯಾತ್ಮಿಕ ಜೀವನದಲ್ಲಿ ಅತೀವ ಸುಖ, ಶಾಂತಿ ಹಾಗೂ ಸಮಾಧಾನಗಳು ಲಭಿಸುತ್ತವೆ. ನಿಧಾನವಾಗಿ ಅವರ ಮನಸ್ಸು ಮತ್ತು ಬುದ್ಧಿ ಶಾಂತಿಯನ್ನು ಪಡೆಯುತ್ತವೆ. ಅವರ ಕೆಲಸ ಕಾರ್ಯಗಳು ಸರಾಗವಾಗಿ ನಡೆಯುತ್ತವೆ. ಅವರು ಎಲ್ಲಾ ಸಮಯದಲ್ಲೂ ಸಮಚಿತ್ತವುಳ್ಳವರಾಗಿರುತ್ತಾರೆ. ಅಂತಹ ಮನುಷ್ಯನನ್ನು ಕುರಿತು ನಮ್ಮ ಹಿರಿಯರು.

*ಗೃಹೀತ್ವಾಪೀನ್ದ್ರಿರರ್ಥಾನ್ಯೋನ ದ್ವೇಷ್ಟಿನ ಹೃಷ್ಯತಿ । ವಿಷ್ಣೋರ್ಮಾಯಾಮಿದಂ ಪಶ್ಯನ್ಸ್ ವೈ ಭಾಗವತೋತ್ತಮಃ ॥*

ಯಾರು ಪ್ರಪಂಚದ ವಸ್ತುಗಳನ್ನು ಇಂದ್ರಿಯಗಳ ಮೂಲಕ ಅನುಭವಿಸುತ್ತಿದ್ದರೂ ಅವೆಲ್ಲ ಕೇವಲ ಭಗವಂತನ ವಿಷ್ಣು ಮಾಯೆ ಎಂದು ತಿಳಿದು ಅತಿಯಾಗಿ ಅದರಲ್ಲಿ ರಮಿಸುವುದಾಗಲೀ, ವಿರಮಿಸುವುದಾಗಲೀ ಮಾಡುವುದಿಲ್ಲವೋ ಅಂತವನು ಭಗವಂತನ ಭಕ್ತರಲ್ಲಿ ಶ್ರೇಷ್ಠ ಎನಿಸುತ್ತಾನೆ.

ಎಲ್ಲರೂ ತಮ್ಮ ಜೀವನವನ್ನು ಪವಿತ್ರವನ್ನಾಗಿ ಮಾಡಿಕೊಳ್ಳಿರಿ ಎಂದು ಆಶೀರ್ವದಿಸುತ್ತಿದ್ದೇನೆ.

*ಕೃಪೆ : 'ಶ್ರೀ ಶಂಕರ ಕೃಪಾ'*


**PRAVEEN KUMAR ADYAPADY**
NOTARY & ADVOCATE
MANGALORE OFFICE: JANVI PLAZA, IInd FLOOR, BUNTS HOSTEL, MANGALORE
BAJPE OFFICE: OZANAM COMPLEX, IInd FLOOR, CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

The RIGHT Place for the RIGHT Customer
**RAJESH POWER PRESS**
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 9448481696
E-mail : msraghunathrao@hotmail.com

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಪಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

**PRAMOD AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O) 2212723 (R)
M. : 9448260225
Wholesale & Retail Dealers in 2 & 3 WHEELERS SPARES & ACCESSORIES
Prop. : Ln. K. HARSHA KUMAR

ಪತ್ರಿಕೆಗೆ ಶುಭ ಬಯಸುವ–
ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು

Prop. : *Kishore Kumar Kedige*
Ph. : 2231524
M. : 9880726325
**KYADIGE AUTOMOBILES**
Opp. to D. P. Stores Main Road, B. C. Road, Bantwal Tq.
*Dealers in : 2 & 3 WHEELERS SPARES*

**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

# ಶ್ರೀ ಸುಬ್ರಹ್ಮಣ್ಯ ಸಭಾ ನೂತನ ಆಡಳಿತ ಮಂಡಳಿ

**ಶ್ರೀ ಸುಬ್ರಹ್ಮಣ್ಯ ಸಭಾ ನೂತನ ಆಡಳಿತ ಮಂಡಳಿಯ ಪದಾಧಿಕಾರಿಗಳು :**

ಅಧ್ಯಕ್ಷರು : **ಶ್ರೀ ಹರ್ಷಕುಮಾರ್ ಕೇದಿಗೆ**

ಉಪಾಧ್ಯಕ್ಷರುಗಳು : **ಡಾ। ಎ. ಪಿ. ಕೃಷ್ಣ; ಶ್ರೀಮತಿ ಸುಮಂಗಲಾ ಪ್ರಭಾಕರ್**

ಕಾರ್ಯದರ್ಶಿ : **ಶ್ರೀ ಕರುಣ್ ರಾವ್ ಬೆಳ್ಳೆ**

ಜೊತೆ ಕಾರ್ಯದರ್ಶಿಗಳು : **ಶ್ರೀ ಅನಿಲ್ ರಾವ್ ಬಿ. ಎಸ್.; ಶ್ರೀ ಚೇತನ್ ಶರ್ಮ**

ಕೋಶಾಧಿಕಾರಿ : **ಶ್ರೀ ಪಿ. ಶ್ರೀಕಾಂತ್ ರಾವ್**

**ಆಡಳಿತ ಮಂಡಳಿಯ ಸದಸ್ಯರುಗಳು :** ಶ್ರೀ ಕೆ. ಪ್ರಭಾಕರ್ ರಾವ್, ಶ್ರೀ ಇನ್ನ ಚಂದ್ರಕಾಂತ್ ರಾವ್, ಶ್ರೀ ಕೆ. ಪ್ರದೀಪ್ ರಾವ್, ಶ್ರೀ ಪಿ. ಸಂಜಯ್ ಕುಮಾರ್, ಶ್ರೀ ಎಂ. ಎಸ್. ಅರುಣ್ ಕುಮಾರ್, ಶ್ರೀಮತಿ ವೈಜಯಂತಿಮಾಲಾ ಬೆಳ್ಳೆ, ಶ್ರೀ ಪಿ. ಮುರಳೀಧರ ರಾವ್, ಶ್ರೀ ನಾಗರಾಜ್ ವರ್ಕಾಡಿ, ಶ್ರೀ ಎಚ್. ರಘುವೀರ್ ರಾವ್, ಶ್ರೀ ಕೆ. ಸುರೇಶ್ ರಾವ್, ಶ್ರೀ ಸಂತೋಷ್ ಕುಮಾರ್ ಯು., ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀ ಪಿ. ಉದಯ ಕುಮಾರ್, ಶ್ರೀ ಐ. ಪಿ. ನಾಗರಾಜ್, ಶ್ರೀ ಮುರಳಿ ಅದ್ಯಪಾಡಿ, ಶ್ರೀ ಮನೀಷ್ ರಾವ್ ಯು., ಶ್ರೀ ಕೀರ್ತನ್ ಶಾಸ್ತ್ರೀ, ಶ್ರೀ ಎಂ. ಸುರೇಶ್ ರಾವ್

**ವಿಶೇಷ ಆಮಂತ್ರಿತರು :** ಶ್ರೀ ಎನ್. ಕೆ. ಜಗನ್ನಿವಾಸ್ ರಾವ್, ಶ್ರೀ ಬಿ. ರವೀಂದ್ರ ರಾವ್, ಶ್ರೀ ಬಿ.ಎಸ್. ವಿನೋದ್ ರಾವ್, ಶ್ರೀ ಟಿ. ಬಿ. ಮೋಹನ್ ರಾವ್, ಶ್ರೀ ಎನ್.ಎಸ್. ನಟರಾಜ್, ಶ್ರೀ ಸೋಮಶೇಖರನ್, ಶ್ರೀ ಕೆ. ವೇಣುಗೋಪಾಲ್ ಶ್ಯಾನುಭೋಗ್, ಶ್ರೀ ಸಿ. ರಾಘವೇಂದ್ರ ರಾವ್, ಶ್ರೀ ಕೆ. ವಿಜಯಕುಮಾರ್, ಶ್ರೀ ಎನ್.ಎಸ್. ರಾಜಾರಾಮ್, ಶ್ರೀ ಬಿ. ವಿ. ಜಯಚಂದ್ರ, ಶ್ರೀ ಬಿ. ಎಚ್. ವಿ. ಪ್ರಸಾದ್, ಶ್ರೀ ಎನ್. ಶಶಿಕಾಂತ್ ರಾವ್, ಶ್ರೀ ಪ್ರವೀಣಚಂದ್ರ ಶರ್ಮಾ, ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್.

**ಶ್ರೀ ಸುಬ್ರಹ್ಮಣ್ಯ ಸಭಾ ಚಾರಿಟೇಬಲ್ ಟ್ರಸ್ಟ್ ಸದಸ್ಯರು :** ಶ್ರೀ ಅಶೋಕ್ ರಾವ್ ನಂದಾವರ, ಶ್ರೀ ಯು. ಭುಜಂಗ ರಾವ್, ಡಾ। ಎಂ. ಕೆ. ಜಯಲಕ್ಷ್ಮೀ, ಡಾ। ಹರೀಶ್ ಜೋಶಿ, ಶ್ರೀ ಬಿ. ಗೋಪಿನಾಥ್ ರಾವ್, ಶ್ರೀ ಎಂ. ನಾಗೇಶ್ ರಾವ್, ಶ್ರೀ ಬಿ. ರಾಜಪ್ರಸಾದ್, ಶ್ರೀಮತಿ ಸುಮಂಗಲಾ ರಾವ್.

**ಎಜ್ಯುಕೇಶನ್ ಕಮಿಟಿ :** ಡಾ। ಎ. ಪಿ. ಕೃಷ್ಣ, ಶ್ರೀ ಇನ್ನ ಚಂದ್ರಕಾಂತ್ ರಾವ್, ಶ್ರೀ ಕೆ. ಪ್ರಭಾಕರ್ ರಾವ್, ಶ್ರೀ ಕೆ. ಪ್ರದೀಪ್ ರಾವ್, ಶ್ರೀ ಐ. ಪಿ. ನಾಗರಾಜ್ ರಾವ್, ಶ್ರೀ ಬಿ. ಎಸ್. ಅನಿಲ್ ರಾವ್, ಶ್ರೀ ಕೀರ್ತನ್ ಶಾಸ್ತ್ರಿ, ಶ್ರೀ ಸಿಎ ನಾಗರಾಜ್ ಶರ್ಮಾ, ಶ್ರೀ ಉದಯ ಕುಮಾರ್ ಪಿ., ಶ್ರೀ ಎನ್. ಎಸ್. ನಟರಾಜ್.

**ಶಿವಸದನ ಟಾಸ್ಕ್ ಫೋರ್ಸ್ :** ಡಾ। ಎ. ಪಿ. ಕೃಷ್ಣ, ಶ್ರೀ ಕೆ. ಪ್ರಭಾಕರ್ ರಾವ್, ಶ್ರೀ ಉದಯ ಕುಮಾರ್ ಪಿ., ಶ್ರೀ ಪಿ. ಮುರಳೀಧರ್ ರಾವ್, ಶ್ರೀ ಅನಿಲ್ ರಾವ್ ಬಿ. ಎಸ್., ಶ್ರೀ ಇನ್ನ ಚಂದ್ರಕಾಂತ್ ರಾವ್.

**ಹಾಸ್ಟೆಲ್ ಕಮಿಟಿ :** ಸಿ ಎ. ನಾಗರಾಜ್ ಶರ್ಮಾ, ಡಾ। ಎ. ಪಿ. ಕೃಷ್ಣ, ಶ್ರೀ ಎಚ್. ರಘುವೀರ್ ರಾವ್, ಶ್ರೀ ಬಿ. ವಿ. ಜಯಚಂದ್ರ, ಶ್ರೀ ಪಿ. ಶ್ರೀಕಾಂತ್ ರಾವ್, ಶ್ರೀ ಬಿ. ಎಸ್. ಅನಿಲ್ ರಾವ್, ಶ್ರೀ ಇನ್ನ ಚಂದ್ರಕಾಂತ್ ರಾವ್, ಶ್ರೀ ಸಂತೋಷ್ ಯು.

**ರಿಸೋರ್ಸ್ ಮೊಬಿಲೈಸೇಶನ್ ಕಮಿಟಿ :** ಶ್ರೀ ಕೆ. ಪ್ರಭಾಕರ್ ರಾವ್, ಶ್ರೀ ಇನ್ನ ಚಂದ್ರಕಾಂತ್ ರಾವ್, ಶ್ರೀ ನಾಗರಾಜ್ ವರ್ಕಾಡಿ, ಶ್ರೀ ಬಿ.ಎಚ್.ವಿ. ಪ್ರಸಾದ್, ಶ್ರೀ ಸಂಜಯ್ ರಾವ್ ಪಿ., ಶ್ರೀ ಮನೀಷ್ ರಾವ್ ಯು., ಶ್ರೀ ಅನಿಲ್ ರಾವ್ ಬಿ.ಎಸ್., ಶ್ರೀ ಪ್ರವೀಣಚಂದ್ರ ಶರ್ಮಾ.

**ಮಹಿಳಾ ವೇದಿಕೆ :** ಶ್ರೀಮತಿ ಕುಸುಮಾ ನವೀನ್‌ಕುಮಾರ್, ಶ್ರೀಮತಿ ಪುಷ್ಪಾ ಶ್ರೀನಿವಾಸ್, ಶ್ರೀಮತಿ ಸುಮಂಗಲಾ ಪ್ರಭಾಕರ್, ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ಸ್ನೇಹಲತಾ ದಿವಾಕರ್, ಶ್ರೀಮತಿ ಭುವನೇಶ್ವರಿ ನಾಗರಾಜ್, ಶ್ರೀಮತಿ ಪ್ರಭಾ ಪ್ರಭಾಕರ್ ರಾವ್, ಡಾ। ಜಯಲಕ್ಷ್ಮೀ, ಶ್ರೀಮತಿ ಅನುರಾಧ ಕಿಶೋರ್, ಶ್ರೀಮತಿ ಕವಿತಾ ಪ್ರದೀಪ್, ಶ್ರೀಮತಿ ಅರುಣಾ ಸೋಮಶೇಖರ್, ಶ್ರೀಮತಿ ಸುಮನಾ ಕೃಷ್ಣ, ಶ್ರೀಮತಿ ಕನಕವಲ್ಲಿ ಹರ್ಷಕುಮಾರ್, ಶ್ರೀಮತಿ ಭಾರತಿ ಸಂಜಯ್ ರಾವ್, ಶ್ರೀಮತಿ ಭುವನೇಶ್ವರಿ ಉದಯ್ ರಾವ್.

**ಯುವ ವೇದಿಕೆ :** ಶ್ರೀ ಮನೀಷ್ ರಾವ್ ಯು. ಶ್ರೀ ಅನಿಲ್ ಎನ್., ಶ್ರೀ ಕೆ. ಸುರೇಶ್ ರಾವ್, ಶ್ರೀ ಮುರಳೀಧರ ಅದ್ಯಪಾಡಿ, ಶ್ರೀ ಶ್ರೀಹರಿ ಅದ್ಯಪಾಡಿ, ಶ್ರೀ ಕೀರ್ತನ್ ಶಾಸ್ತ್ರಿ, ಶ್ರೀ ಪ್ರಮೋದ್ ಕುಮಾರ್ ಕೆ., ಶ್ರೀ ಕಿರಣ್‌ಕುಮಾರ್ ಎಮ್., ಶ್ರೀ ನಾಗೇಶ್ ರಾವ್ ಎಂ., ಶ್ರೀ ಪ್ರವೀಣ್ ಅದ್ಯಪಾಡಿ.




ನವಗಿರಿ ಹೊಸಬೆಟ್ಟು ವನಿತಾ ಸಮಾಜದ 50ನೇಯ ವರ್ಷದ ಸಂಭ್ರಮದಲ್ಲಿ ಮಾಜಿ ಉಪಾಧ್ಯಕ್ಷೆ ಕಾರ್ಯದರ್ಶಿಯಾಗಿ ಮಾಡಿದ ಸಮಾಜ ಸೇವೆಯನ್ನು ಗುರುತಿಸಿ ಶ್ರೀ ಸುಬ್ರಹ್ಮಣ್ಯ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್‌ರವರನ್ನು ಗೌರವಿಸಲಾಯಿತು.

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ಧ್ರುವ್**

*Prop. : P. Srikanth Rao* Mobile : 9343361618
**M/s. SAMARPAN**
HOUSE OF STATIONERY
"Vijaya Nivas", Opp. Pio Mall
Bejai Church Road, Mangalore - 4

*Manish Rao U.* Tel : (O) 2223301 Mobile : 9448726499 / 8884284939
**NAVA COMPUTERS**
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

ಪತ್ರಿಕೆಗೆ ಶುಭ ಬಯಸುವ– ಮೊಬೈಲ್ : 9972989678 9448104174
**ರವಿಕಿರಣ್ ಕ್ಯೊಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

Phone : 0824 - 2440110, 2213946
**VISHRAM MOTORS (P.) LTD.**
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)

**PREETHIKA AUTOMOBILES**
✆ 2493633 9845851573
*Wholesale & Retail Dealers in :*
2 & 3 WHEELERS, SPARES & ACCESSORIES
KARANGALPADY, MANGALORE - 575 003
*Dealers in :*
Minda Switches, M. K. Products, Swiss Auto Products, Power Coils

## ಹೊಸ ಬಾಳಿನ ಹೊಸಿಲಲಿ ನಿಂತಿರುವ...

ಪಡುಬೆಳ್ಳೆ ಸಚ್ಚಿದಾನಂದ ರಾವ್ ಮತ್ತು ಶ್ರೀಮತಿ ಹರ್ಷಿಣಿಯವರ ಸುಪುತ್ರಿ **ಚಿ। ಸೌ। ಶರಧಿ**ಯ ವಿವಾಹವು ಶ್ರೀ ಶಂಕರ ಕನಕ ಮತ್ತು ಶ್ರೀಮತಿ ರಾಜೇಶ್ವರಿಯವರ ಸುಪುತ್ರ **ಚಿ। ಪ್ರದೀಪ್**ನೊಂದಿಗೆ ಉಡುಪಿಯ 'ಶಾರದಾ ಕಲ್ಯಾಣ ಮಂಟಪ'ದಲ್ಲಿ ತಾ. 23–01–2022ನೇ ರವಿವಾರ ನೆರವೇರಿತು.

* * *

ಬೊಕ್ಕಸ ಶ್ರೀ ಚಂದ್ರಶೇಖರ ರಾವ್ ಮತ್ತು ಶ್ರೀಮತಿ ಕವಿತಾರವರ ಸುಪುತ್ರಿ **ಚಿ। ಸೌ। ಚೈತ್ರಾ**ಳ ವಿವಾಹವು ಇನ್ನಪದವು ಶ್ರೀ ಸುಧೀರ್ ಮತ್ತು ಶ್ರೀಮತಿ ಸುಭದ್ರಾರವರ ಸುಪುತ್ರ **ಚಿ। ಆಕಾಶ್**ನೊಂದಿಗೆ ತಾ. 23–01–2022ನೇ ರವಿವಾರ ಮೂಡಬಿದ್ರೆಯ 'ಪಾಂಚಜನ್ಯ ಸಭಾಂಗಣ'ದಲ್ಲಿ ನೆರವೇರಿತು.

* * *

ಬಪ್ಪನಾಡು ಶ್ರೀ ಚಿತ್ತರಂಜನ್ ಮತ್ತು ಶ್ರೀಮತಿ ಭುವನೇಶ್ವರಿಯವರ ಸುಪುತ್ರಿ **ಚಿ। ಸೌ। ನವ್ಯಾ ರಾವ್**ರವರ ವಿವಾಹವು ಕುಂಜಾರು ಶ್ರೀ ಕೃಷ್ಣ ರಾವ್ ಹಾಗೂ ಶ್ರೀಮತಿ ಭಾರತಿಯವರ ಸುಪುತ್ರ **ಚಿ। ರಜತ್**ನೊಂದಿಗೆ ಸುಳ್ಯದ 'ಕುಂಬಗೋಡು ಅಚ್ಯುತ ಭಟ್ ಸಭಾಂಗಣ'ದಲ್ಲಿ ನೆರವೇರಿತು.

* * *

ಚಾಂತಾರು ಬ್ರಹ್ಮಾವರ ಶ್ರೀ ಸುದರ್ಶನ್ ರಾವ್ ಮತ್ತು ಶ್ರೀಮತಿ ಗಾಯತ್ರೀಯವರ ಸುಪುತ್ರ **ಚಿ। ನಿಶಾಂತ್ ರಾವ್**ರವರ ವಿವಾಹವು ಪಡುಬಿದ್ರೆ ಶ್ರೀ ನರೇಂದ್ರಸ್ವಾಮಿ ಮತ್ತು ಶ್ರೀಮತಿ ವೀಣಾರವರ ಸುಪುತ್ರಿ **ಚಿ। ಸೌ। ಶ್ರುತಿ**ಯುವರೊಂದಿಗೆ ತಾ. 20–01–2022ನೇ ಗುರುವಾರ ಪಡುಬಿದ್ರೆಯ ಬಾಲಗಣಪತಿ ದೇವಾಲಯದಲ್ಲಿ ನೆರವೇರಿತು.

## ಭವತೀ ಭಿಕ್ಷಾಂ ದೇಹಿ..



ಅಡೂರು ಸಿ. ದೀಕ್ಷಿತ್ ಮತ್ತು ಶ್ರೀಮತಿ ಉಷಾರವರ ಸುಪುತ್ರ **ಚಿ। ಅದ್ವೈತ್**ನ ಬ್ರಹ್ಮೋಪದೇಶವು ತಾ. 24–01–2022ನೇ ಸೋಮವಾರ ಪಾವಂಜೆ 'ಶರದ್ವತ ಸಭಾಂಗಣ'ದಲ್ಲಿ ನೆರವೇರಿತು.


***

ಅಡೂರು ಶ್ರೀ ರೋಹಿತ್ ಸಿ. ಮತ್ತು ಶ್ರೀಮತಿ ಸವಿತಾರವರ ಸುಪುತ್ರ **ಚಿ। ಶರವದ್**ನ ಬ್ರಹ್ಮೋಪದೇಶ ತಾ. 24–01–2022ನೇ ಸೋಮವಾರ ಪಾವಂಜೆ 'ಶರದ್ವತ ಸಭಾಂಗಣ'ದಲ್ಲಿ ನೆರವೇರಿತು.

***

ಸುರತ್ಕಲ್‌ನ ಶ್ರೀ ವಾಸುದೇವ್ ಶ್ಯಾನುಭೋಗ್ ಮತ್ತು ಶ್ರೀಮತಿ ವಾಣಿಶ್ರೀಯವರ ಸುಪುತ್ರ **ಚಿ। ಶ್ರೇಯಸ್**ನ ಬ್ರಹ್ಮೋಪದೇಶವು ತಾ. 23–01–2022ನೇ ರವಿವಾರ ಮಲ್ಲಮಾರ್‌ನ 'ಶ್ರೀನಿವಾಸ ನಿಲಯ'ದಲ್ಲಿ ನೆರವೇರಿತು.

ಪತ್ರಿಕೆಗೆ ಶುಭ ಬಯಸುವ –
ಇನ್ನ ಶ್ರೀನಿವಾಸ ರಾವ್ ಹಾಗೂ
ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್
ಮತ್ತು ಕುಟುಂಬ
ಶ್ರೀ ಗಣೇಶಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

Muralidhara Rao Adyapadi
Proprietor
Mob : 94480 27259
99803 16434

SPANDANA
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

ರಾಮಾ ಅಟೋಮೊಬೈಲ್ಸ್

ಮಾರುತಿ ವಾಹನ ತಜ್ಞರು

ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಉಡುಪಿಯ ಬನ್ನಂಜೆ ನಿವಾಸಿ ಕಾರ್ಕಳದ ಕರ್ವಾಲಿನ **ಶ್ರೀಮತಿ ವಿಜಯ ಆರ್. ರಾವ್** (80 ವರ್ಷ), ದಿ। ಕಬ್ಬಿನಾಲೆ ರಾಮಣ್ಣ ಹೆಬ್ಬಾರ್‌ರವರ ಪತ್ನಿ ತಾ. 4–1–2022ನೇ ಮಂಗಳವಾರ ಮಂಗಳೂರಿನಲ್ಲಿ ನಿಧನ ಹೊಂದಿರುತ್ತಾರೆ. ಮೃತರು ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು, ಓರ್ವ ಸಹೋದರನಾದ ಶ್ರೀ ವೈ. ಮನೋಹರ ಪ್ರಸಾದ್ ಕರ್ವಾಲು ಹಾಗೂ ಇಬ್ಬರು ಸಹೋದರಿಯರು ಮತ್ತು ಅಪಾರ ಬಂಧು–ಬಾಂಧವರನ್ನು ಅಗಲಿರುತ್ತಾರೆ.

❖❖❖



ಈಶ್ವರಮಂಗಲ **ವಿಶ್ವೇಶ್ವರಯ್ಯ** (84) ತಾ. 24–01–2022ನೇ ಸೋಮವಾರ ಪುತ್ತೂರಿನ ದರ್ಬೆಯಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಇಬ್ಬರು ಹೆಣ್ಣುಮಕ್ಕಳು ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

❖❖❖



ಕಾರ್ಕಳ ತಾಲೂಕಿನ ಪ್ರಸಿದ್ಧ ಕರ್ವಾಲು ಮನೆತನದ **ಶ್ರೀಮತಿ ಅನಸೂಯ ಯಸ್. ರಾವ್** (78 ವರ್ಷ) ನಿವೃತ್ತ ಮುಖ್ಯ ಶಿಕ್ಷಕಿ. ಜೋಡುರಸ್ತೆ ಸಮೀಪದ ಗಿರಿಜಾ ಶೆಟ್ಟಿ ಅ.ಹಿ.ಪ್ರಾ. ಶಾಲೆ, ಬೈರ್ಲಬೆಟ್ಟು (ದಿ। ಪಿ. ಶಿವ ರಾವ್, ಮುಖ್ಯ ಶಿಕ್ಷಕರು, ಸ. ಹಿ. ಪ್ರಾಥಮಿಕ ಶಾಲೆ, ಕಾಬೆಟ್ಟು ಇವರ ಪತ್ನಿ) ಇವರು ತಾ. 03–01–2022ನೇ ಸೋಮವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ದೈವಾಧೀನರಾಗಿರುತ್ತಾರೆ. ದಿವಂಗತರು ಓರ್ವ ಸಹೋದರ ಶ್ರೀ ಮನೋಹರ ಪ್ರಸಾದ್ ಮತ್ತು ಇಬ್ಬರು ಸಹೋದರಿಯರು, ಮೂವರು ಪುತ್ರಿಯರು, ಮೊಮ್ಮಕ್ಕಳು, ಕುಟುಂಬದವರು ಹಾಗೂ ಅನೇಕ ಬಂಧು–ಬಾಂಧವರನ್ನು ಅಗಲಿರುತ್ತಾರೆ.

❖❖❖



**ನೂಂಜ ಮೋಹನ್ ರಾವ್** (89) ತಾ. 31–01–2022ನೇ ಸೋಮವಾರ ಮಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಮಗ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

❖❖❖




ದಿ। ರಾಯಿ ಶಾಮರಾವ್ ಪತ್ನಿ **ಶ್ರೀಮತಿ ಸುಕನ್ಯಾ ರಾವ್** (78) ತಾ. 25–01–2022ನೇ ಮಂಗಳವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

❖❖❖



ಉಡುಪಿಯ ಭಾರತ್ ಬಿಲ್ಡರ್ಸ್‌ನ ಪ್ರಾಲಕರೂ ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದ ಮಾಜಿ ಅಧ್ಯಕ್ಷರೂ ಆದ **ಯು. ಪ್ರಫುಲ್ಲಚಂದ್ರ ರಾಯರು** (61 ವರ್ಷ) ತಾ. 03–01–2022ನೇ ಗುರುವಾರ ಹೃದಯಾಘಾತದಿಂದ ನಿಧನರಾದರು. ಶೃಂಗೇರಿಯ ಜಗದ್ಗುರುಗಳ ಪರಮ ಭಕ್ತರಾದ ಇವರು ಶ್ರೀ ಶಂಕರತತ್ವ ಪ್ರಚಾರ ಅಭಿಯಾನದ ಉಡುಪಿ ಜಿಲ್ಲೆಯ ಸಂಚಾಲಕರಾಗಿದ್ದು ಅದ್ವೈತ ಸಿದ್ಧಾಂತದ ಪ್ರಚಾರ ಕಾರ್ಯದಲ್ಲಿ ಸದಾ ನಿರತರಾಗಿದ್ದರು. ಉಡುಪಿಯ ಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಸಂಸ್ಥಾಪಕರಾಗಿದ್ದು ಈಗ ಅದರ ನಿರ್ದೇಶಕರಾಗಿ ಮುನ್ನಡೆಸುತ್ತಿದ್ದರು. ಹತ್ತು ಹಲವು ಸಂಘ–ಸಂಸ್ಥೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡ ಇವರು ಸಮಾಜದ ಎಲ್ಲ ಬಂಧುಗಳಿಗೂ ಚಿರಪರಿಚಿತರು.

❖❖❖



**ಎಲ್ಲೂರು ದಿವಾಕರ್ ರಾವ್** (72) ತಾ. 13–01–2022ನೇ ಗುರುವಾರ ಕುತ್ಯಾರ್‌ನಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

ಕೆ. ಲಕ್ಷ್ಮೀನಾರಾಯಣ ಶರ್ಮ
ಅತಿಕಾರಬೈಲು, ವಗ್ಗ
✆ : 9448043969
8861497325
ಶಿವಗಿರಿ ಎಂಟರ್‌ಪ್ರೈಸಸ್
SHIVAGIRI ENTERPRISES


# • ಪುಣ್ಯಸ್ಮರಣೆ •



ಆಗಮನ
ತಾ. 27-12-1943

ನಿರ್ಗಮನ
ತಾ. 20-01-2021

## ದಿ। ಭಾಸ್ಕರ ರಾವ್ ಕೋಲ್ಪೆ

ಕೋಲ್ಪೆ ಕೊಡಂಗೆಯ ಆಯುರ್ವೇದ ಪಂಡಿತ ದಿ। ವೆಂಕಟ್ರಮಣಯ್ಯ ಮತ್ತು ಭಾಗೀರಥಿಯಮ್ಮ ದಂಪತಿಗಳ ದ್ವಿತೀಯ ಪುತ್ರ ಬೆಂಗಳೂರು ಸಂಜಯನಗರ ನಿವಾಸಿ **ದಿ। ಭಾಸ್ಕರ ರಾವ್**ರವರು ನಮ್ಮನ್ನು ಅಗಲಿ ಇಂದಿಗೆ **ವರ್ಷ ಒಂದು** ಸಂದಿತು.

ಸಮಾಜಕ್ಕೆ, ಧಾರ್ಮಿಕ ಕೇಂದ್ರಗಳಿಗೆ ತನ್ನ ಕೈಲಾದ ಕೊಡುಗೆ ನೀಡುವುದರೊಂದಿಗೆ ಬಂಧು–ಬಾಂಧವರ ಕಷ್ಟಕಾರ್ಪಣ್ಯಕ್ಕೆ ಸ್ಪಂದಿಸುತ್ತಿದ್ದ ಆತ್ಮೀಯ ಸಹೋದರ ಇಂದು ನಮ್ಮೊಂದಿಗಿಲ್ಲ. ಅವನ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಪ್ರಾರ್ಥಿಸುವ –

**ಜಿ. ಕೆ. ಕೋಲ್ಪೆ** (ಅಣ್ಣ)

**ತಮ್ಮಂದಿರು, ತಂಗಿಯಂದಿರು** ಮತ್ತು **ಕುಟುಂಬಸ್ಥರು**

# ವಿಶಿಷ್ಟ ಗಣರಾಜ್ಯೋತ್ಸವ ಆಚರಣೆ




ಮೈಸೂರಿನ ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾದ ಆಶ್ರಯದಲ್ಲಿ ತಾರೀಕು 26–01–2022ನೇ ಬುಧವಾರ ಜ್ಞಾನಶಕ್ತಿ ಪ್ರಾರ್ಥನಾ ಮಂದಿರದಲ್ಲಿ ಸಂಘದ ಸದಸ್ಯರಿಂದ ಶ್ರಮದಾನ ಕಾರ್ಯಕ್ರಮದ ಮೂಲಕ ಗಣರಾಜ್ಯೋತ್ಸವವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಬೆಳಗ್ಗೆ ಇಡೀ ಪ್ರಾರ್ಥನಾ ಮಂದಿರವನ್ನು ಉತ್ಸಾಹದಿಂದ ಭಾಗವಹಿಸಿದ್ದ ಸಮಾಜ ಬಾಂಧವರು ಶುಚಿಗೊಳಿಸಿದರು. ಅಲ್ಲದೆ ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸಿ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ಗಣೇಶ ಶಾಸ್ತ್ರೀ ಭೋಜನದ ವ್ಯವಸ್ಥೆ ಮಾಡಿದ್ದು, ಶ್ರೀಮತಿ ಪುಷ್ಪಾ ವೆಂಕಟರಮಣ ರಾವ್ ಅವರಿಗೆ ಜನ್ಮದಿನದ ಶುಭಾಶಯ ಕೋರಿ ಅಭಿನಂದಿಸಲಾಯಿತು.

# ಕಲಾತಪಸ್ವಿ ಎಲ್ಲೂರು ಜಗದೀಶ ರಾವ್ ಇನ್ನಿಲ್ಲ



ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಕ ಹಾಗೂ ಶ್ರೀಮತಿ ಗಿರಿಜಮ್ಮ ಅವರ ಒಂಭತ್ತು ಮಕ್ಕಳಲ್ಲಿ ಮೂರನೆಯ ಸುಪುತ್ರನಾಗಿ ತಾ. 11–05–1934ರಂದು ಜನಿಸಿ, ಪ್ರಥಮ ಸಂಗೀತಾಭ್ಯಾಸವನ್ನು ತಂದೆಯವರಿಂದಲೇ ಕಲಿತು, ನಂತರ ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ SSLC ಮತ್ತು TCH ವಿದ್ಯಾಭ್ಯಾಸ, ನಂತರ ಉದ್ಯಾವರ ಆಯುರ್ವೇದ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ, ಸಂಗೀತ ಸೆಳೆತಕ್ಕೊಳಗಾಗಿ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ಮೈಸೂರು ಶ್ರೀ ರಾಜರತ್ನಂ ಪಿಳ್ಳೆಯವರಲ್ಲಿ ಸಂಗೀತ ಹಾಗೂ ಭರತನಾಟ್ಯ ಶಿಕ್ಷಣ ಕಲಿತರು. ನಂತರ ಗುಬ್ಬಿ ವೀರಣ್ಣ ಕಂಪನಿಯಲ್ಲಿ ಸೇರಿ ಹಾರ್ಮೋನಿಯಂ ಕಲೆಯಲ್ಲಿ ಪರಿಣತಿಯನ್ನು ಪಡೆದರು. ಜಗದೀಶ ರಾಯರು ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ ಮಂಗಳೂರಿನ ಹತ್ತಾರು ಶಾಲಾ ವಾರ್ಷಿಕೋತ್ಸವಗಳಲ್ಲಿ ಸಂಗೀತ ಮತ್ತು ನೃತ್ಯದ ಜವಾಬ್ದಾರಿ ವಹಿಸಿಕೊಳ್ಳುತ್ತಿದ್ದರು. ಊರಿಗೆ ಮರಳಿ ಸಂಗೀತ ಸೇವೆಯಲ್ಲಿ ಮುಂದುವರೆದರು. ಕಲಾರಾಧಕ, ಕಲಾಸಾಧಕ, ಕಲಾಸೇವಕ, ಕಲಾತಪಸ್ವಿಯಾಗಿ ಜೀವನದ ಪ್ರತಿಕ್ಷಣವನ್ನೂ ಸಂಗೀತ ಶಾರದೆಯ ಸೇವೆಗಾಗಿ ಮುಡಿಪಾಗಿಟ್ಟು, ಸಾರ್ಥಕತೆಯ ಕ್ಷಣಗಳೊಂದಿಗೆ, ತುಂಬು ಸಂಸಾರದೊಂದಿಗೆ 88ರ ಇಳಿವಯಸ್ಸಿನಲ್ಲಿ ವಿಶ್ರಾಂತ ಜೀವನವನ್ನು ನಡೆಸುತ್ತಿರುವ ಹಾರ್ಮೋನಿಯಂ ಮಾಂತ್ರಿಕ, ಕರಾವಳಿಯ ಹೆಮ್ಮೆಯ ಸಾಧಕ "ಎಲ್ಲೂರು ಜಗದೀಶ ರಾವ್" ಅವರ ಯಶೋಗಾಥೆ. ಬಾಳಸಂಗಾತಿ ಶ್ರೀಮತಿ ಶಾಂತಾ, ಅದ್ಯಪಾಡಿಯ ಸುಬ್ಬರಾಯ ಹಾಗೂ ಶ್ರೀಮತಿ ಜಲಜಾಕ್ಷಿಯವರ ಪುತ್ರಿ.

ನಾಲ್ವರು ಪುತ್ರರು ಹಾಗೂ ಐವರು ಪುತ್ರಿಯರ ತುಂಬಿದ ಕುಟುಂಬ ಇವರದ್ದು. ಮೇ ತಿಂಗಳ 1956ರಲ್ಲಿ ವಿವಾಹವಾದ ಇವರದ್ದು ಪ್ರೇಮ ವಿವಾಹ.

ಮುಂದೆ ಎಲ್ಲೂರಿಗೆ ಬಂದಾಗ ಶಾಲೆಗಳಲ್ಲಿ ಇವರನ್ನು ವಾರ್ಷಿಕೋತ್ಸವದ ಸಂದರ್ಭದಲ್ಲಿ ನಾಟಕ, ಸಂಗೀತ, ನಾಟ್ಯ ಪ್ರದರ್ಶನಕ್ಕೆ ಶಾಲಾ ಮಕ್ಕಳನ್ನು ತಯಾರಿಗೊಳಿಸಲು ಇವರು ಸದಾ ಸಿದ್ಧರಾಗಿರುತ್ತಿದ್ದರು.

ಇವರು ಬರೆದ ಹಲವಾರು ಭಾವಗೀತೆಗಳು ಕಿನ್ನಿಗೋಳಿಯ ಅಂತರಂಗ ಮಾಸಪತ್ರಿಕೆಯಲ್ಲಿ ಪ್ರಕಟವಾಗಿವೆ. ಸುಮಾರು ಅರವತ್ತರ ದಶಕದಲ್ಲಿ ಆಧುನಿಕ ತಂತ್ರಜ್ಞಾನದ ಯಾವುದೇ ಗಂಧಗಾಳಿ ಇಲ್ಲದಿರುವ ಕಾಲದಲ್ಲಿ, ಎಲ್ಲೂರಿನ ಪರಿಸರದ ಸುಮಾರು 20 ಕಿ.ಮೀ. ವ್ಯಾಪ್ತಿಯ ಪರಿಧಿಯಲ್ಲಿ ಎಲ್ಲೇ ಆಗಲಿ ಶಾಲಾ ಕಾಲೇಜು ವಾರ್ಷಿಕೋತ್ಸವ ಸಮಾರಂಭ, ಭಜನೆ, ಹರಿಕಥೆ ಇವೆಲ್ಲದಕ್ಕೂ ಪಕ್ಕವಾದ್ಯಕ್ಕೆ ಜಗದೀಶ ರಾವ್ ಅವರೇ ಆಯ್ಕೆ.

ಕೇವಲ ಹಾರ್ಮೋನಿಯಂ, ತಬಲ, ಕೊಳಲು, ಪಿಟೀಲು ಈ ವಾದ್ಯಗಳು ಪ್ರಚಲಿತವಿದ್ದ ಕಾಲವದು. ಎರ್ಮಾಳ್ ವಾಸುದೇವ ರಾವ್ ತಬಲಾ ವಾದಕರಾಗಿ, ಬೆಲ್ಮಣ್ ಹರಿದಾಸ ಉಡುಪ ಅವರು ಕೊಳಲು ವಾದಕರಾಗಿ ಸಹಕರಿಸುತ್ತಿದ್ದರು.

ಚಪ್ಪಲಿ ರಹಿತ ಕಾಲ್ನಡಿಗೆಯಲ್ಲೇ ಜಲ್ಲಿ ಕಲ್ಲುಗಳ ಹಾದಿಯನ್ನು ಬಳಸಿ ಹಾರ್ಮೋನಿಯಂ ಹೊತ್ತು ಪ್ರತಿ ಕಾರ್ಯಕ್ರಮವನ್ನು ಅಲ್ಲಿಯ ಜನರಿಗೆ ಚಂದಗಾಣಿಸಿಕೊಟ್ಟ ಅವರು ತುಂಬು ಮನಸ್ಸಿನಿಂದ ಎಷ್ಟೇ ಸಣ್ಣ ಪ್ರಮಾಣದ ಸಂಭಾವನೆಯನ್ನು ಕೊಟ್ಟರೂ ಸಂತೋಷದಿಂದ ಸ್ವೀಕರಿಸಿ, ಸಂತೃಪ್ತ ಭಾವನೆಯಿಂದ ಹಿಂದಿರುಗುವ ಕಲಾಪ್ರೇಮಿ. ಉಡುಪಿಯಿಂದ ಮಂಗಳೂರಿನವರೆಗೆ ಆ ಕಾಲದಲ್ಲಿ ಮಲ್ಪೆ ಶಂಕರನಾರಾಯಣ ಸಾಮಗ, ಮಲ್ಪೆ ರಾಮದಾಸ ಸಾಮಗ, ಶೇಣಿ ಗೋಪಾಲಕೃಷ್ಣ ಭಟ್, ಪೊಳಲಿ ಜಗದೀಶ ದಾಸ್, ಅಂಬಾತನಯ ಮುದ್ರಾಡಿ, ಶ್ರೀಶದಾಸ ಉಡುಪಿ, ವಾಗೀಶ ಆಚಾರ್ಯ ಹೊಸಬೆಟ್ಟು... ಮೊದಲಾದ ಘಟಾನುಘಟಿ ಹರಿದಾಸರುಗಳ ಹರಿಕಥಾ ಕಾರ್ಯಕ್ರಮಕ್ಕೆ ಹಾರ್ಮೋನಿಯಂ ಸಾಥ್‌ಕೊಟ್ಟ ಮಹನೀಯ.

ತನ್ನ ಮನೆಯಲ್ಲಾದರೂ ಹಾರ್ಮೋನಿಯಂ ಹಿಡಿದು ಒಂದು ರಾಗದ ಆರೋಹಣ ಅವರೋಹಣ ಮಾಡಲು ಶುರು ಮಾಡಿದರೆ ಸುಮಾರು 4 ಗಂಟೆಗಳ ಕಾಲ ಅದೇ ರಾಗದಲ್ಲಿ ತನ್ನ ಮನೋಧರ್ಮವನ್ನು ಪ್ರಕಟಿಸುತ್ತಿದ್ದ ಮಹಾತಪಸ್ವಿ. ಬಹಳಷ್ಟು ಜನ ಶಿಷ್ಯಂದಿರಿಗೆ ಯಾವುದೇ ಫಲಾಪೇಕ್ಷೆ ಇಲ್ಲದೆ ಸಂಗೀತ ಕಲಿಸಿದ ಕರುಣಾಮಯಿ. ಇಂತಹ ಸಾಧಕ ಇಂದು (ತಾ. 2–02–2022) ತನ್ನ ಹಿರಿಯ ಪುತ್ರ ಶ್ರೀ ಪ್ರದೀಪ ಕುಮಾರರವರ ಸ್ವಗೃಹದಲ್ಲಿ ಕೊನೆಯುಸಿರೆಳೆದರು. ಪತ್ನಿ ಶಾಂತಾ ಹಾಗೂ ನಾಲ್ವರು ಪುತ್ರರು, ಐವರು ಪುತ್ರಿಯರನ್ನು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

**ಶ್ರೀಯುತರ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುವ ದುಃಖತಪ್ತ ಕುಟುಂಬ.**

ಪತ್ರಿಕೆಗೆ ಶುಭ ಬಯಸುವ–
**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

*Sri Hari Adyapady*
*Proprietor*
Ph : 0824-2251597 (R)
2252119 (O)
Mobile : 9448344612
9964072489
**SHIVA ELECTRICALS**
2nd Floor, Ozanam Complex, Church Building
Main Road, BAJPE, MANGALORE
*We undertake all types of Electrical, Plumbing and Sanitary works*



# ಸಿರಿಯತ್ತ ಬೆನ್ನು ತೋರಿಸಿ ಹರಿಯತ್ತ ಮುಖ ತಿರುಗಿಸಿದ ಮಹನೀಯರು

'ಸಿರಿ' ಎಂದರೆ 'ಶ್ರೀ'. 'ಶ್ರೀ' ಎಂದರೆ ಲಕ್ಷ್ಮಿ, ಮಹಾಲಕ್ಷ್ಮಿ. ಲೌಕಿಕ ದೃಷ್ಟಿಯಲ್ಲಿ, 'ಸಿರಿ' ಎಂಬ ಶಬ್ದಕ್ಕೆ ಹಣ, ಧನ ಐಶ್ವರ್ಯ, ಬೆಳ್ಳಿ, ಬಂಗಾರ ಮಾತ್ರವಲ್ಲದೇ ಹಣದ ಬೆಲೆಯುಳ್ಳ ಭೂಮಿ, ಬ್ಯಾಂಕ್ ಬ್ಯಾಲೆನ್ಸ್, ಶೇರು, ಡಿಬೆಂಚರುಗಳು ಮುಂತಾದವುಗಳೆಲ್ಲವೂ 'ಸಿರಿ', ಸಂಪತ್ತೆಂಬ ಹೆಸರಿನಲ್ಲಿ ಲೀನವಾಗುತ್ತವೆ. ಈ ಸಿರಿ ತರುವ ಆದಾಯದಿಂದ ಮನುಷ್ಯ ಸುಖ ಜೀವನ ನಡೆಸಲು ಸಾಧ್ಯ. ಸಮಾಜದಲ್ಲಿ ಅಧಿಕಾರ, ಅಂತಸ್ತು, ಘನತೆ, ಗೌರವ, ಪ್ರತಿಷ್ಠೆಗಳನ್ನು ಗಳಿಸಲು ಸಾಧ್ಯ. ಇವೆಲ್ಲವೂ ಭೋಗ ಜೀವನದ ಗುಣ ಲಕ್ಷಣಗಳಾದ್ದರಿಂದ ಎಲ್ಲರೂ ಸಿರಿವಂತರಾಗಲು ಜೀವನವೆಲ್ಲಾ ಶ್ರಮಿಸುತ್ತಾರೆ. ಹಣವೇ ಪ್ರಧಾನ, ಅದರ ಗಳಿಕೆಯೇ ಮನುಷ್ಯ ಜೀವನದ ಪರಮೋಚ್ಚ ಗುರಿ ಎಂಬ ತಾರಕ ಮಂತ್ರವನ್ನು ಜಪಿಸುತ್ತಾ, ಇದನ್ನು ಗಳಿಸಿ ಉಳಿಸಿಕೊಳ್ಳಲು ಜೀವನವೆಲ್ಲಾ ಅದೆಷ್ಟು ಶ್ರಮಪಡುತ್ತಾರೆ ಇದರ ನಷ್ಟವಾದರೆ ಜೀವನಪೂರ್ತಿ ಅದೆಷ್ಟು ಕೊರಗಿ ನರಳುತ್ತಾರೆ ಎಂಬುದು ಅನುಭವಿಗಳಿಗೆ ಚೆನ್ನಾಗಿ ಅರಿವಿರುತ್ತದೆ.

ಇಂತಹಾ 'ಸರ್ವೇ ಗುಣಾಃ ಕಾಂಚನಮಾಶ್ರಯಂತಿ' ಎಂಬ ಹೊಗಳಿಕೆಗೆ ಪಾತ್ರವಾಗಿರುವ, ಇಷ್ಟೆಲ್ಲಾ ಶಕ್ತಿಶಾಲಿ 'ಸಿರಿ' ಬೇಡ ಎನ್ನುವವರುಂಟೇ. 'ಸಿರಿ' ಇದ್ದವನು ಇದಕ್ಕೆ ಬೆನ್ನು ತೋರಿಸುವುದು ಎಂದರೆ ಇದೇನು ಮಾತನಾಡಿದಷ್ಟು ಸುಲಭದ ಮಾತೇ? ನಮ್ಮ ಹತ್ತಿರವಿದ್ದ ಸಿರಿಯನ್ನು ನಾವೇ ಹೊರದೂಡಿದರೆ ಮತ್ತೆ ಅದನ್ನು ಗಳಿಸುವುದು ಸುಲಭವೇ! ಇದೆಲ್ಲಾ ಪ್ರಶ್ನೆಗಳು ಪ್ರತಿಯೊಬ್ಬರ ಮನದಲ್ಲಿ ಉದ್ಭವಿಸುವುದರಲ್ಲಿ ಸಂದೇಹವಿಲ್ಲ. ಈ ಹಿನ್ನೆಲೆಯಲ್ಲಿ, ಪ್ರಸಕ್ತ ಲೇಖನದ ಶೀರ್ಷಿಕೆಯಲ್ಲಿ **'ಸಿರಿಗೆ ಬೆನ್ನು ತೋರಿಸಿ ಹರಿಯತ್ತ ಮುಖ ತಿರುಗಿಸಿದ ಮಹನೀಯರು' ಎಂದಿರುವುದನ್ನು ನಂಬಲಾಗದು. ಒಂದು ವೇಳೆ ಇಂತಹವರು ಹಿಂದೆ ಇದ್ದರು ಎಂದರೆ ಇವರ್‍ಯಾರು ಎಂಬುದು ನಮಗೆ ತಿಳಿಯದು, ನಿಮಗೆ ಗೊತ್ತಿದ್ದರೆ ತಿಳಿಸಿ ಎನ್ನಬಹುದು ಇದನ್ನು ಓದಿದವರು. ಇಂತಹವರ ಮಾಹಿತಿಗಾಗಿ ಇಲ್ಲಿದೆ ಇಂತಹಾ ಕೆಲವು ಮಹನೀಯರ ಕಿರು ಪರಿಚಯ :–**

ಈ ಮಹನೀಯರ ಸಾಲಿನಲ್ಲಿ ಮೊದಲು ನಿಲ್ಲುವವರು **ಪ್ರಹ್ಲಾದ**. ಅಸುರ ಚಕ್ರವರ್ತಿಯಾಗಿ, ದೇವಾದಿದೇವತೆಗಳಿಗೂ ಭಯ ಹುಟ್ಟಿಸಿ, ನನ್ನ ರಾಜ್ಯದಲ್ಲಿ ಪ್ರಜೆಗಳು ಯಾವ ದೇವರನ್ನೂ ಪೂಜಿಸಬಾರದು, ನನ್ನನ್ನೇ ಪೂಜಿಸಬೇಕು ಎಂದು ಆಜ್ಞೆ ಮಾಡಿದವನು ಹಿರಣ್ಯಕಶಿಪು. ಈತನ ಮಗನೇ ಪ್ರಹ್ಲಾದ. ಈ ಬಾಲಕ ಮಾತೆಯ ಗರ್ಭದಲ್ಲಿರುವಾಗಲೇ ಶ್ರೀಹರಿಯ ನಾಮ ಸಂಕೀರ್ತನೆ ಕೇಳಿದ್ದರ ಪ್ರಭಾವವೋ ಎಂಬಂತೆ, ಜನನಾನಂತರ ಸಾಧಾರಣ ರಾಜಕುಮಾರರಂತೆ ರಾಜ ಭೋಗಗಳತ್ತ ಕಣ್ಣು ಹಾಯಿಸದೆ, ಸದಾ ಶ್ರೀ ಹರಿಯ ಧ್ಯಾನ, ಸ್ತೋತ್ರದಲ್ಲೇ ನಿರತನಾದ. **ತನ್ನ ಶತ್ರುವಾದ ಶ್ರೀಹರಿಯ ನಾಮಸ್ಮರಣೆ ಬಿಡು ಎಂದು ತಂದೆ ಹಿರಣ್ಯಕಶಿಪು ಮಗನ ಮೇಲೆ ಚತುರೋಪಾಯಗಳನ್ನು ಪ್ರಯೋಗಿಸಿದರೂ ಪ್ರಹ್ಲಾದನು ತಂದೆಯ ಸಲಹೆ – ಆಜ್ಞೆ ಪಾಲಿಸಲಿಲ್ಲ, ಶ್ರೀಹರಿಯನ್ನು ಮರೆಯಲಿಲ್ಲ. ಹೀಗೆ ಬಹು ಸಣ್ಣ ವಯಸ್ಸಿನಲ್ಲೇ ಸಿರಿ, ಸಂಪತ್ತು, ಲೌಕಿಕ ಬದುಕಿಗೆ ಬೆನ್ನು ತೋರಿಸಿ, ಹರಿಯತ್ತ ಮುಖ ಮಾಡಿದ ಪ್ರಹ್ಲಾದ ಶ್ರೀ ನೃಸಿಂಹ ಸ್ವಾಮಿಯ ಕೃಪೆಗೆ ಪಾತ್ರನಾದ.**

ಎರಡನೆಯ ಪ್ರಸಂಗ **ಮೈತ್ರೇಯಿ**ಯದು. ದೇವರಾತ (ಬ್ರಹ್ಮರಥ ಎಂಬುದು ಕೆಲವರ ಅಭಿಪ್ರಾಯ) ಹಾಗೂ ಶಕಲ ಋಷಿಗಳ ಮಗಳಾದ ಸುನಂದೆ ದಂಪತಿಗಳಿಗೆ ಬಹುಕಾಲ ಸಂತಾನವಿರಲಿಲ್ಲ. ಆದ ಕಾರಣ, ದೀರ್ಘಕಾಲ ಕಠಿಣ ತಪಸ್ಸು ಮಾಡಿದ್ದರ ಪರಿಣಾಮವಾಗಿ ಶ್ರೀ ಮಹಾವಿಷ್ಣುವು ಪ್ರತ್ಯಕ್ಷನಾಗಿ, ಜಗತ್ತಿಗೆ ಜ್ಞಾನಕಾಂಡ ಮತ್ತು ಬ್ರಹ್ಮವಿದ್ಯೆ ಬೋಧಿಸಲು ತಾನೇ ದೇವರಾತ ಸುನಂದೆಯರ ಮಗನಾಗಿ ಜನಿಸುವ ವರ ನೀಡಿ ಅದೃಶ್ಯರಾದರು. ಈ ವರದಂತೆ ಜನಿಸಿದವರು **ಯಾಜ್ಞವಲ್ಕ್ಯರು**. ಇವರು ಋಗ್ವೇದವನ್ನು ಬಾಷ್ಕಲ ಮಹರ್ಷಿಗಳಿಂದ, ಸಾಮವೇದವನ್ನು ಜೈಮಿನಿ ಮಹರ್ಷಿಗಳಿಂದ ಹಾಗೂ ಅಥರ್ವಣ ವೇದವನ್ನು ಅರುಣಿಯಿಂದ ಕಲಿತು ತ್ರಿವೇದ ಪಂಡಿತರಾದರು.

ಈ ಮಹರ್ಷಿಗಳು ಕತ ಮಹರ್ಷಿಗಳ ಪುತ್ರಿ ಕಾತ್ಯಾಯಿನಿಯನ್ನು, ನಂತರದಲ್ಲಿ ಮೈತ್ರೇಯಿಯನ್ನೂ ವಿವಾಹವಾದರು. ಜೀವನದ ಉತ್ತರಾರ್ಧದಲ್ಲಿ ಐಹಿಕ ಜೀವನದ ಸುಖಭೋಗಗಳು ಕ್ಷಣಿಕ, ವ್ಯರ್ಥ, ಅರ್ಥಹೀನ ಎಂಬ ಅರಿವು ಮೂಡಿದ ಕಾರಣ, ತಪಸ್ಸಿಗೆ ಹೊರಡಲು ಅನುವಾದರು. ತಮಗೆ ಸೇರಿದ ಸಮಸ್ತ ವಸ್ತುಗಳನ್ನೂ ಭಾಗ ಮಾಡಿ ತೆಗೆದುಕೊಂಡು, ಜೀವನವನ್ನು ಮುಂದುವರಿಸುವಂತೆ ತಮ್ಮಿಬ್ಬರು ಪತ್ನಿಯರಿಗೂ ತಿಳಿಸಿದರು. ಮೊದಲಿಗೆ, ತಮ್ಮ ಪತಿಯಿಂದ ದೂರಾಗಲು ಕಾತ್ಯಾಯಿನಿ ದುಃಖಿತರಾದರೂ ನಂತರ ಪತಿಯ ಉಪದೇಶದಿಂದ ಪ್ರಭಾವಿತರಾಗಿ ಆ ಆಶ್ರಮದಲ್ಲೇ ಉಳಿಯಲು ಒಪ್ಪಿದರು.

ಆದರೆ, ಮೈತ್ರೇಯಿಯು ಮಹರ್ಷಿಗಳ ಮಾತಿಗೆ ಒಪ್ಪದೆ, ಲೌಕಿಕ ಸಂಪತ್ತಿನಿಂದ ಜೀವನ ಭೋಗಿಸಬಹುದೇ ಹೊರತು ಜೀವನ್ ಮುಕ್ತಿ ಪಡೆಯಲಾಗದು. ಆತ್ಮವಿದ್ಯೆಯಿಂದಲೇ ಮೋಕ್ಷ ಸಾಧ್ಯ. ಆದ್ದರಿಂದ ಆತ್ಮ ವಿದ್ಯೆಯನ್ನೇ ತನಗೆ ಉಪದೇಶಿಸಬೇಕೆಂದು ಪತಿಯನ್ನು ಒತ್ತಾಯಿಸಿದರು. ಆಕೆಯ ಮಾತಿನಿಂದ ಸಂತಸಗೊಂಡ ಯಾಜ್ಞವಲ್ಕ್ಯರು ಮೈತ್ರೇಯಿಗೆ ಆತ್ಮವಿದ್ಯೆಯನ್ನು ಉಪದೇಶಿಸಿದರು. ಹೀಗೆ ಮೈತ್ರೇಯಿ ಸಿರಿಯತ್ತ ಬೆನ್ನು ತೋರಿಸಿ, ಹರಿಯತ್ತ ಚಿತ್ತ ತಿರುಗಿಸಿದರು. ಪತಿಯಿಂದ ಆತ್ಮವಿದ್ಯೆಯ ಉಪದೇಶ ಪಡೆದು 'ಬ್ರಹ್ಮವಾದಿನಿ', 'ಆದರ್ಶ ಸ್ತ್ರೀ' ಎಂದು ಪ್ರಸಿದ್ಧರಾದರು.

ಇದುವರೆಗೂ ಉಲ್ಲೇಖಿಸಿದ್ದು ಪುರಾಣ ಕಾಲದ ಕೆಲವು ಪ್ರಸಂಗಗಳು. ಇನ್ನು ಇತ್ತೀಚಿನ ಕಾಲದ ಉದಾಹರಣೆಗಳು ಎಂದರೆ ಲೌಕಿಕ ಜೀವನದ ಆಕರ್ಷಣೆಗಳಿಗೆ ಒಳಗಾಗದೆ ದೈವದತ್ತ ಚಿತ್ತಹರಿಸಿ ಮುಗ್ಧ ಭಕ್ತಿಗೆ ಪ್ರಸಿದ್ಧರಾಗಿ ಶಿವನಲ್ಲಿ ಐಕ್ಯರಾದವರು ಕೋಳೂರು ಕೊಡಗೂಸು, ಮತ್ತು ಬೇಡರ ಕಣ್ಣಪ್ಪ. ತನ್ನ ಭಕ್ತಿಯಿಂದ ಶ್ರೀ ರಂಗನಾಥನನ್ನು ಮೆಚ್ಚಿಸಿ ಆತನಲ್ಲೇ ಐಕ್ಯಳಾದ ಗೋದಾಯಿ ಸಿರಿಯತ್ತ ಬೆನ್ನು ಮಾಡಿದ ಸುಪ್ರಸಿದ್ಧ ಬಾಲ ಭಕ್ತರ ಪಟ್ಟಿಗೆ ಸೇರಿದವರಾಗಿದ್ದಾರೆ.

ಕುರ್ಲಾ ಸಂಸ್ಥಾನದ ದೊರೆ ರಾಣಾ ರತನ್ ಸಿಂಗ್, ಕಮಲಾ ರಾಣಿ ದಂಪತಿಗಳ ಪುತ್ರಿ ಮೀರಾ. ಈಕೆಯ ವಿವಾಹವು ಚಿತ್ತೂರು ಸಂಸ್ಥಾನದ ರಾಜಕುಮಾರನೊಂದಿಗೆ ನಡೆಯಿತು. ಅಂದಿನ ಸಾಮಾಜಿಕ ರೀತಿ, ಆಚಾರದನ್ವಯ ಮೀರಾ ಮನೆಯಲ್ಲಿ ಗೃಹಕೃತ್ಯಗಳನ್ನೂ ಪತಿ ಸೇವೆಯನ್ನೂ ಮುಗಿಸಿದ ನಂತರ, ಶ್ರೀ ಗಿರಿಧರನ ಧ್ಯಾನ, ಭಜನೆಗಳಲ್ಲಿ ನಿರತಳಾಗಿ ಸಮಯ ಕಳೆಯುತ್ತಿದ್ದಳು. ತನ್ನ ಪತ್ನಿ ಸದಾ ತನ್ನ ಸಮೀಪವೇ ಇರಬೇಕು, ತನ್ನ ವಿನಹಾ ಬೇರ್‍ಯಾವ ಹವ್ಯಾಸವೂ ಆಕೆಗೆ ಇರಬಾರದು ಎಂಬ ನಿರೀಕ್ಷೆ ಇಟ್ಟ ಆಕೆಯ ಪತಿ ಇದಕ್ಕೆ ಆಕ್ಷೇಪಿಸಿದರು ಗಿರಿಧರನ ಸ್ಮರಣೆಯಿಂದ ದೂರವಿರೆಂದರು. ಮೀರಾ ಇವರ ಸಲಹೆ – ಆಜ್ಞೆಯನ್ನು ನಿರ್ಲಕ್ಷಿಸಿದಳು.

ಮೀರಾಳನ್ನು ಪತಿ, ಮನೆಯವರು ಹಲವು ಕಷ್ಟಗಳಿಗೆ ಗುರಿ ಮಾಡಿದರು. ತಮ್ಮ ಮಾತು ಕೇಳದಾಗ ಮನೆ ಬಿಟ್ಟು ಹೋಗು ಎಂದರು. ಸರಿ ಎಂದು ಸಂತಸದಿಂದ ಪತಿಯ ಗೃಹ ತ್ಯಜಿಸಿ, ಜೊತೆಗಿದ್ದ ಸಾಧುಸಂತ ಭಕ್ತರೊಡಗೂಡಿ, ಗಿರಿಧರನನ್ನು ಧ್ಯಾನಿಸುತ್ತಾ ವೃಂದಾವನಕ್ಕೆ ಆಗಮಿಸಿದಳು. ಆಕೆಯ ಮುಖದಲ್ಲಿದ್ದ ಅನಿರ್ವಚನೀಯ ಕಳೆ, ದೈವ ಭಕ್ತಿಗಳನ್ನು ಸೂಕ್ಷ್ಮವಾಗಿ ಗಮನಿಸಿದ ಬಹು ಮಂದಿ ಭಕ್ತರು ಮೀರಾಳ ಗುಂಪು ಸೇರಿ ಗಿರಿಧರನ ಭಕ್ತರಾದರು. ತನ್ನ ಮಧುರ ಕಂಠದಿಂದ ಗಿರಿಧರನನ್ನು ಸ್ಮರಿಸಿ ನೂರಾರು ಕೀರ್ತನೆಗಳನ್ನು ರಚಿಸಿ ಹಾಡಿದಳು. 'ಮೀರಾ ಕೇ ಪ್ರಭು ಗಿರಿಧರ ಲಾಲ' ಎಂದು ಹಾಡುತ್ತಾ ದಿನ ರಾತ್ರಿಗಳ ವ್ಯತ್ಯಾಸ ಕಾಣದೆ ಆತನ ಧ್ಯಾನದಲ್ಲೇ ಮಗ್ನಳಾದಳು. ಕೊನೆಗೊಂದು ದಿನ, ಆ ಗಿರಿಧರಲಾಲನಲ್ಲೇ ಐಕ್ಯಳಾದಳು. ಮೀರಾ ಅಮರಳಾದಳು. 'ಮೀರಾ ಎಂದರೆ ಶ್ರೀಕೃಷ್ಣ, ಶ್ರೀಕೃಷ್ಣನೆಂದರೆ ಭಕ್ತೆ ಮೀರಾ' ಎಂಬ ಮನೆ ಮನೆಯ ಮಾತಿಗೆ ಪಾತ್ರಳಾದಳು. ರಾಜ ಮನೆತನದಲ್ಲಿ ಜನಿಸಿ, ರಾಜ ಕುಟುಂಬದ ವರನನ್ನು ವಿವಾಹವಾದರೂ ಬಹು ಬೇಗ ಲೌಕಿಕ ಜಗತ್ತಿನಿಂದ ದೂರವಾಗಿ ಸದಾ ಗಿರಿಧರನ ಧ್ಯಾನದಲ್ಲೇ ಮಗ್ನಳಾದ ಮೀರಾಬಾಯಿ 'ಮೀರಾ ಕೆ ಪ್ರಭು ಗಿರಿಧರಲಾಲಾ' ಎಂದು ಸಾಮಾನ್ಯರ ಬಾಯಲ್ಲಿ ನಲಿದಾಡುವ ಗೀತೆಯಾದಳು.

**ಇವೆಲ್ಲಕ್ಕಿಂತಾ ಇತ್ತೀಚಿನ ಕಾಲದ ಉದಾಹರಣೆಗಳಿವೆಯೇ?** ಎನ್ನುವವರು ನೆನೆಪಿಸಿಕೊಳ್ಳಬೇಕಾದದ್ದು ದಾಸ ಶ್ರೇಷ್ಠ ಪುರಂದರ ದಾಸರು, 'ನವಕೋಟಿ ನಾರಾಯಣ' ಎಂದೇ ಜನರಲ್ಲಿ ಪ್ರಸಿದ್ಧರಾದ ಈ ದಾಸರ ಜೀವನದಲ್ಲಿ ನಡೆದ ಒಂದು ಸಣ್ಣ ಘಟನೆ ತಟ್ಟನೆ ದಾಸರಲ್ಲಿ ವೈರಾಗ್ಯ ಮೂಡಿಸಿತು. ತಮ್ಮಲ್ಲಿದ್ದ ಹಲವು ಕೋಟಿಗಳಷ್ಟು ಸಿರಿಯ ಮೇಲೆ ತುಳಸಿ ದಳವಿಟ್ಟು 'ಕೃಷ್ಣಾರ್ಪಣ' ಎಂದವರು ತಂಬೂರಿ ತಾಳ ಜೋಳಿಗೆಗಳೊಂದಿಗೆ ಶ್ರೀಹರಿಯನ್ನು ಧ್ಯಾನಿಸುತ್ತಾ ಹೊರಟರು. **ಸಿರಿಯತ್ತ ಬೆನ್ನು ತೋರಿಸಿ ಹರಿಯತ್ತ ಮುಖ ತಿರುಗಿಸಿ ಜ್ಞಾನಿಯಾದರು.**

ಕಾಕರ್ಲ ರಾಮಬ್ರಹ್ಮಂ ಮತ್ತು ಸೀತಮ್ಮ (ಶಾಂತಮ್ಮ) ಎಂಬ ದಂಪತಿಗಳ ಮೂರನೆಯ ಪುತ್ರನಾಗಿ ಜನಿಸಿದರು ಶ್ರೀ ತ್ಯಾಗರಾಜ ಸ್ವಾಮಿಗಳು. ಇವರ ಗುರು ವೆಂಕಟರಮಣಯ್ಯನವರು ತಮ್ಮ ಶಿಷ್ಯ ತ್ಯಾಗರಾಜರಿಗೆ ದೊರೆಯ ಕೃಪೆ ದೊರೆತು ವಿದ್ವತ್ ಪ್ರತಿಭೆಯು ಮತ್ತಷ್ಟು ಉಜ್ವಲವಾಗಿ ಬೆಳಗಲಿ ಎಂಬ ಸದುದ್ದೇಶದಿಂದ ಇದನ್ನು ತಂಜಾವೂರಿನ ದೊರೆಯ ಗಮನಕ್ಕೆ ತಂದಾಗ, ಆ ದೊರೆಯು ಹರ್ಷಿತನಾಗಿ, ಇವರು ತಮ್ಮ ಆಸ್ಥಾನದಲ್ಲಿ ಸಂಗೀತ ಕಚೇರಿ ನಡೆಸಲು, ವಿದ್ವಾಂಸನಾಗಿರಲು ಆಹ್ವಾನವನ್ನು ಬೆಲೆ ಬಾಳುವ ಬಹುಮಾನಗಳನ್ನೂ ತ್ಯಾಗರಾಜರಿಗೆ ಕಳುಹಿಸಿದರು. ಇಂತಹ ರಾಜಾಶ್ರಯ ದೊರಕಲು ಪೂರ್ವಜನ್ಮದ ಸುಕೃತವಿರಬೇಕು. ಇದು ಸಿಕ್ಕಿದರೆ ಸಾಕು, ತಮ್ಮ ಅದೃಷ್ಟದ ಬಾಗಿಲು ತೆರೆದಂತೇನೇ, ಧನ, ಕೀರ್ತಿ, ಯಶಸ್ಸು, ಅಧಿಕಾರ ಎಲ್ಲವೂ ನಮ್ಮ ವಶ ಎಂದೇ ಹಲವರು ಭಾವಿಸಿದ್ದ ಆ ಕಾಲದಲ್ಲೇ, ತ್ಯಾಗರಾಜರು ಈ ಯಾವ ಲೌಕಿಕ ಲಾಭಗಳಿಗೂ ಮನಸೋಲದೆ, ದೊರೆಯ ಆಹ್ವಾನವನ್ನು ನಯವಾಗಿ ತಿರಸ್ಕರಿಸಿ 'ನಿಧಿ ಚಾಲಾ ಸುಖಮಾ, ಶ್ರೀರಾಮುಣಿ ಸನ್ನಿಧಿ ಸುಖಮಾ' ಎಂಬ ಕೃತಿ ರಚಿಸಿ ಹಾಡಿದ ಈ ರಾಜರು ಸಿರಿಯತ್ತ ಬೆನ್ನು ತಿರುಗಿಸಿ ಹರಿಯತ್ತ ಮುಖ ಮಾಡಿ ಧನ್ಯತೆಯನ್ನು ಪಡೆದರು.

ಶ್ರೀರಾಮಚಂದ್ರನ ಪರಮ ಭಕ್ತರಾಗಿದ್ದ ಭದ್ರಾಚಲ, ರಾಮದಾಸರು, ಸಂತ ಸಮರ್ಥ ರಾಮದಾಸರು ಎಲ್ಲರೂ ಲೌಕಿಕ ಜಗತ್ತಿನ ಆಕರ್ಷಣೆಗಳಿಗೆ ಬೆನ್ನು ತೋರಿಸಿ ದೈವದತ್ತ ಚಿತ್ತ ನೆಟ್ಟು ದೈವಾನುಗ್ರಹಕ್ಕೆ ಪಾತ್ರರಾದವರು.

ಪಂಡರಾಪುರದ ದೈವ ಪಾಂಡುರಂಗನ ಧ್ಯಾನದಲ್ಲೇ ಕಾಲ ಕಳೆದು ಆತನ ಕೃಪೆಗೆ ಪಾತ್ರರಾದ ಸಂತ ನಾಮದೇವ್, ಮುಕ್ತಾಬಾಯಿ, ಜನಾಬಾಯಿ, ನಾಮ ದೇವರ ಹೆಸರುಗಳೂ ಈ ಸಂದರ್ಭದಲ್ಲಿ ಸ್ಮರಣಾರ್ಹವಾಗಿವೆ. ಹೀಗೆ ಭಕ್ತರ ಹೆಸರುಗಳು ಅವರ ಮಹತ್ತರ ಸಾಧನೆಯತ್ತ ಹೇಳುತ್ತಾ ಹೊರಟರೆ ಪುಟಗಳು ಬೆಳೆದು ಪುಸ್ತಕವಾಗಬಹುದು.

**ಇಷ್ಟೆಲ್ಲಾ ಕೇಳಿದ ಮೇಲೆ "ಸಿರಿಯೋ! ಶ್ರೀಹರಿಯೋ! ಯಾರು ಹಿತವರು ನಿಮಗೆ ಈ ಇಬ್ಬರೊಳಗೆ" ಎಂಬ ಪ್ರಶ್ನೆ ಮನದ ಮುಂದೆ ಬಂದು ನಿಲ್ಲುತ್ತದೆ. ಇದರ ಸೂಕ್ತ ನಿರ್ಧಾರ ನಮ್ಮದು ಮತ್ತು ನಿಮ್ಮದು.**

**ಶ್ರೀ ಎಂ. ಆರ್. ವೆಂಕಟರಾಮಯ್ಯ ✆ : 70198 69811**

# ದಾನದ ಮಹತ್ತ್ವ

ಡಾ| ಎಚ್. ಎಸ್. ಅನಂತನಾರಾಯಣ ಬೆಂಗಳೂರು
ಮೊಬೈಲ್ : 9980632810

ದಾನ ಎಂದರೆ ಕೊಡುವವನು ದಾನದ ವಸ್ತುವಿನ ಮೇಲಿನ ತನ್ನ ಸ್ವಾಮಿತ್ವವನ್ನು ಸ್ವೀಕರಿಸುವವನ ಸ್ವಾಧೀನ ಮಾಡುವುದು ಎಂದರ್ಥ. ಮಹಾನಾರಾಯಣೋಪನಿಷತ್ತಿನಲ್ಲಿ ದಾನದ ಬಗ್ಗೆ ಹೀಗೆ ಹೇಳಿದೆ. 'ದಕ್ಷಿಣೆಯ ರೂಪದಲ್ಲಿ ಕೊಡುವುದೇ ಯಜ್ಞದ ಫಲಕ್ಕೆ ಸಾಧನ, ಜಗತ್ತಿನಲ್ಲಿ ಎಲ್ಲ ಪ್ರಾಣಿಗಳೂ ಕೊಡುವವನನ್ನೇ ಆಶ್ರಯಿಸಿರುತ್ತವೆ. ದಾನದಿಂದ ಶತ್ರುತ್ವವು ದೂರವಾಗುತ್ತದೆ, ದಾನದಿಂದ ದ್ವೇಷಿಸುವರು ಮಿತ್ರರಾಗುತ್ತಾರೆ'. (೭೯.೬ ದಾನಂ ಯಜ್ಞಾನಾಂ ವರೂಥಂ ದಕ್ಷಿಣಾ, ಲೋಕೇ ದಾತಾರಂ ಸರ್ವಭೂತಾನಿ ಉಪಜೀವಂತಿ, ದಾನೇನಾರಾತೀಃ ಅಪಾನುದಂತ, ದಾನೇನ ದ್ವಿಷಂತೋ ಮಿತ್ರಾ ಭವಂತಿ) ದಾನಗಳನ್ನು ಹತ್ತೆಂದು, ಹದಿನಾರೆಂದು ಲೆಕ್ಕಿಸುತ್ತಾರೆ. ಭೂದಾನ, ಸುವರ್ಣದಾನ, ಗೋದಾನ, ಇವೆಲ್ಲಕ್ಕಿಂತ ಅನ್ನದಾನವೇ ಮಿಗಿಲಾದದ್ದು ಎಂದು ತಿಳಿದವರು ಹೇಳುತ್ತಾರೆ. ಎಲ್ಲಕ್ಕೂ ಮೂಲದ ಅನ್ನದಿಂದ ಪ್ರಾಣ, ಪ್ರಾಣದಿಂದ ಬಲ, ಎಂದು ಹೇಳುತ್ತಾ, ಕೊನೆಗೆ ಅನ್ನವನ್ನು ಕೊಡುವುದರಿಂದ ಆ ಎಲ್ಲವನ್ನೂ ಕೊಟ್ಟಂತೆ ಆಗುತ್ತದೆ (೭೯.೧೫ ತಸ್ಮಾದ್ ಅನ್ನಂ ದದತ್ ಸರ್ವಾಣ್ಯೇತಾನಿ ದದಾತಿ) ಎನ್ನುತ್ತದೆ ಉಪನಿಷತ್ತು. ಪ್ರಾಣಿಗಳು ಹುಟ್ಟುವುದೇ ಅನ್ನದಿಂದ, ಅವು ವೃದ್ಧಿಯಾಗುವುದೇ ಅನ್ನದಿಂದ, ಅವು ಲಯವಾಗುವುದೂ ಅನ್ನದಿಂದಲೇ ಎಂದು ತೈತ್ತಿರೀಯ ಉಪನಿಷತ್ತು ಹೇಳುತ್ತದೆ. (೨.೨ ಅನ್ನಾದ್ ಭೂತಾನಿ ಜಾಯಂತೇ, ಜಾತಾನ್ಯನ್ನೇನ ವರ್ಧಂತೇ, ಅದ್ಯತೇತ್ತಿ ಚ ಭೂತಾನಿ). ಭಗವದ್ಗೀತೆಯಲ್ಲಿ ದಾನವನ್ನು ಸಾತ್ತ್ವಿಕ, ರಾಜಸಿಕ, ತಾಮಸಿಕ ಎಂದು ಮೂರು ಬಗೆಯಲ್ಲಿ ವಿಂಗಡಿಸಿ, 'ದಾನ ಮಾಡತಕ್ಕದ್ದು ಎಂದು ಮನಸ್ಸಿನಲ್ಲಿ ನಿಶ್ಚಯಿಸಿ, ದೇಶ, ಕಾಲ, ಪಾತ್ರವನ್ನರಿತು ಪ್ರತ್ಯುಪಕಾರವನ್ನು ನಿರೀಕ್ಷಿಸದೇ, ಶ್ರದ್ಧೆಯಿಂದ ಕೊಡುವ ದಾನವು ಸಾತ್ತ್ವಿಕ ಎನಿಸುತ್ತದೆ'. (೧೭.೨೦ ದಾತವ್ಯಮ್ ಇತಿ ಯದ್ದಾನಂ ದೀಯತೇಽನುಪಕಾರಿಣೇ / ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ತ್ವಿಕಂ ಸ್ಮೃತಮ್.) ಮಹಾಭಾರತಲ್ಲಿ ಭೀಷ್ಮರು ಯುಧಿಷ್ಠಿರನಿಗೆ ಧರ್ಮವನ್ನು ಉಪದೇಶಿಸುತ್ತಾ, ಹೀಗೆ ಹೇಳಿದ್ದಾನೆ. 'ಲೋಕದಲ್ಲಿ ಅನ್ನವನ್ನು ಕೊಡುವವನು ಪ್ರಾಣವನ್ನು ಕೊಟ್ಟಂತೆ, ಹಾಗೆ ಪ್ರಾಣವನ್ನು ಕೊಡುವವನು ಎಲ್ಲವನ್ನೂ ಕೊಟ್ಟಂತೆ. ಆದ್ದರಿಂದ ತನ್ನ ಅಭಿವೃದ್ಧಿಯನ್ನು ಬಯಸುವವರು ವಿಶೇಷವಾಗಿ ಅನ್ನದಾನವನ್ನು ಮಾಡಬೇಕು' (ಅನ್ನದಃ ಪ್ರಾಣಿದೋ ಲೊಕೇ, ಪ್ರಾಣದಃ ಸರ್ವದೋ ಭವೇತ್। ತಸ್ಮಾದ್ ಅನ್ನಂ ವಿಶೇಷೇಣ ದಾತವ್ಯಂ ಭೂತಿಮ್ ಇಚ್ಛತಾ॥) ಇದನ್ನೇ ಪುಷ್ಟೀಕರಿಸುವಂತೆ ಮಹಾಭಾರತದಲ್ಲಿ ಒಂದು ರೋಚಕ ಕಥೆಯಿದೆ.

ಬಹಳ ಹಿಂದೆ ಕುರುಕ್ಷೇತ್ರದಲ್ಲಿ ಒಬ್ಬ ಬಡ ಬ್ರಾಹ್ಮಣನಿದ್ದನು. ಅವನಿಗೆ ಒಂದು ಹೊತ್ತು ತಿನ್ನುವುದಕ್ಕೂ ಗತಿ ಇರಲಿಲ್ಲ. ಹೆಂಡತಿ, ಮಗ ಮತ್ತು ಸೊಸೆ, ಹೀಗೆ ನಾಲ್ವರ ಜೀವನ ಆಗಬೇಕಿತ್ತು. ಅವನು ಉಂಛವೃತ್ತಿಯಿಂದ (ಅಂದರೆ ಕ್ಷೇತ್ರಸ್ವಾಮಿಯು ಬತ್ತ, ಗೋಧಿ ಇವುಗಳ ತೆನೆಯನ್ನು ಬಡಿದು ಅದರಿಂದ ಒದಗಿದ ಕಾಳುಗಳನ್ನು ತೆಗೆದುಕೊಂಡು ಹೋದಮೇಲೆ ದೂರದೂರಕ್ಕೆ ಹಾರಿದ್ದ ಕೆಲವು ಕಾಳುಗಳನ್ನು ಆರಿಸಿಕೊಂಡು ಬರುವುದು.) ಇತರರ ಹೊಲ–ಗದ್ದೆಗಳಲ್ಲಿ ದೊರೆತ ಕಾಳುಗಳನ್ನು ಆರಿಸಿ ತಂದು, ಅದನ್ನು ಹಿಟ್ಟು ಮಾಡಿ, ಬೇಯಿಸಿ ಎಲ್ಲರೂ ಸಮನಾಗಿ ಹಂಚಿಕೊಂಡು ಒಂದು ಹೊತ್ತು ಊಟ ಮಾಡಿ ಜೀವಿಸುತ್ತಿದ್ದರು. ಹೀಗಿರುವಾಗ ಒಮ್ಮೆ ದುರ್ಭಿಕ್ಷದಿಂದ ಒಂದು ದಿನ ಕಾಳೇ ಸಿಗಲಿಲ್ಲ. ಹಾಗಾಗಿ ಅವರೆಲ್ಲರೂ ಅಂದು ಉಪವಾಸ ಮಾಡಬೇಕಾಯಿತು. ಮರುದಿನ ಮಧ್ಯಾಹ್ನದವರೆಗೆ ಅಲೆದಲೆದು ಒಂದು ಸೇರಿನಷ್ಟು ಜವೇಗೋಧಿಯ ಕಾಳನ್ನು ಆರಿಸಿ ತಂದನು. ಅದನ್ನು ಹಿಟ್ಟು ಮಾಡಿ ಬೇಯಿಸಿ, ಜಪಾಹ್ನಿಕಗಳಾದ ಮೇಲೆ ಅಗ್ನಿಗೆ ನಿವೇದಿಸಿ, ನಂತರ ಎಲ್ಲರೂ ಹಂಚಿಕೊಂಡು ಉಣ್ಣಲು ಕುಳಿತರು. ಅನ್ನಕ್ಕೆ ಪ್ರಾರ್ಥನೆ ಸಲ್ಲಿಸಿ ಅಪೋಷಣ ತೆಗೆದುಕೊಂಡು ತಿನ್ನಲು ಪ್ರಾರಂಭಿಸಬೇಕು ಎನ್ನುವಷ್ಟರಲ್ಲಿ ಅತಿಥಿಯೊಬ್ಬರ ಆಗಮನವಾಯಿತು. ಧರ್ಮನಿಷ್ಠನಾದ ಬ್ರಾಹ್ಮಣನು ಅತಿಥಿಗೆ ಅರ್ಘ್ಯಪಾದ್ಯಾದಿಗಳನ್ನು ಕೊಟ್ಟು ಪೂಜಿಸಿ, ತನ್ನ ಪಾಲಿನ ಹಿಟ್ಟನ್ನು ಎಲೆಯ ಮೇಲೆ ಬಡಿಸಿದನು. ಅತಿಥಿಯು ಸಂತೋಷದಿಂದ ಊಟ ಮಾಡಿದನು. ಆದರೆ ಹಸಿವು ತೀರಲಿಲ್ಲ. ಇನ್ನೂ ಬೇಕೆಂಬಾಸೆ ತೋರಿಸಿದನು. ಗಂಡನಿಗೆ ಅನುರೂಪಳಾದ ಬ್ರಾಹ್ಮಣನ ಹೆಂಡತಿಯು ಕೂಡಲೇ ತನ್ನ ಪಾಲಿನ ಹಿಟ್ಟನ್ನು ಬಡಿಸಿದಳು. ಅದರಿಂದಲೂ ಹೊಟ್ಟೆ ತುಂಬಲಿಲ್ಲ. ನಂತರ ಮಗನು ಹಾಗೂ ಅವನ ಹೆಂಡತಿಯೂ ತಮ್ಮ ತಮ್ಮ ಭಾಗದ ಹಿಟ್ಟನ್ನು ಬಡಿಸಿದರು. ಎಲ್ಲವನ್ನೂ ಊಟ ಮಾಡಿದ ಮೇಲೆ ಅತಿಥಿಗೆ ಹೊಟ್ಟೆ ತುಂಬಿತು. ತೃಪ್ತಿಯಾಯಿತು. ಬ್ರಾಹ್ಮಣನಿಗೆ ತನ್ನನ್ನಾಶ್ರಯಿಸಿರುವ ಹೆಂಡತಿ ಮೊದಲಾದವರಿಗೆ ಅನ್ನವಿಲ್ಲದೆ ಉಪವಾಸ ಇರಬೇಕಾಗಿ ಬಂದಿತ್ತಲ್ಲ ಎಂದು ವ್ಯಥೆಯಾದರೂ, ಅವರೂ ಸಂತೋಷದಿಂದ ತಮ್ಮ ಹಸಿವನ್ನು ಲೆಕ್ಕಿಸದೆ ಅತಿಥಿಯನ್ನು ತೃಪ್ತಿಪಡಿಸಿದರು.

ಅತಿಥಿಯು ಬ್ರಾಹ್ಮಣನನ್ನು ಕುರಿತು, "ನೀನು ಮತ್ತು ನಿನ್ನ ಕುಟುಂಬದವರು ಮಾಡಿದ ದಾನವು ಅತ್ಯಂತ ಪರಿಶುದ್ಧವಾದದ್ದು. ನೀವಿದನ್ನು ನ್ಯಾಯದಿಂದ, ಧರ್ಮದಿಂದ ಸಂಪಾದಿಸಿದ್ದು. ಇದರಿಂದ ನಿನ್ನ ಪಿತೃಗಳಿಗೆ ಸದ್ಗತಿಯಾಗಿದೆ. ಶ್ರದ್ಧೆಯಿಂದ ಮಾಡಿದ ಈ ಅನ್ನದಾನದಿಂದ ದೇವತೆಗಳು ಸಂಪ್ರೀತರಾಗಿದ್ದಾರೆ. ಹಸಿವಿನಿಂದ ಬುದ್ಧಿ ಕೆಡುತ್ತದೆ. ಧರ್ಮಬುದ್ಧಿ ಲೋಪಿಸುತ್ತದೆ. ವಿವೇಕ ಹೋಗುತ್ತದೆ. ಆದರೆ ನೀವೆಲ್ಲರೂ ಹಸಿವನ್ನು ಲೆಕ್ಕಿಸದೇ ಧರ್ಮವೇ ದೊಡ್ಡದೆಂದು ಸಂತೋಷದಿಂದ ದಾನ ಮಾಡಿರುವಿರಿ. (ನಜಾತು ಕಾರ್ಮಾತ್... ಧರ್ಮ್ಂ ತ್ಯಜೇತ್ ಜೀವಿತಸ್ಯಾಪಿ ಹೇತೋಃ ಎಂಬ ವ್ಯಾಸವಾಕ್ಯವನ್ನಿಲ್ಲಿ ಸ್ಮರಿಸಬಹುದು.) ಸತ್ಪಾತ್ರನಿಗೆ, ಸಕಾಲದಲ್ಲಿ, ಶ್ರದ್ಧೆಯಿಂದ ದಾನ ಮಾಡಿದರೆ ಅವರಿಗೆ ಸ್ವರ್ಗದ ಬಾಗಿಲು ತೆರೆಯುತ್ತದೆ ಎಂದು ಹೇಳಿ ತನ್ನ ನಿಜರೂಪವನ್ನು ತೋರಿಸಿದನು. "ನಾನು ಧರ್ಮದೇವ. ನಿಮ್ಮ ಧರ್ಮನಿಷ್ಠೆಯನ್ನು ಪರೀಕ್ಷಿಸಲೆಂದು ಬಂದೆ. ನೀವು ಆ ಪರೀಕ್ಷೆಯಲ್ಲಿ ಉತ್ತೀರ್ಣರಾದಿರಿ" ಎಂದನು. ಅಷ್ಟು ಹೊತ್ತಿಗೆ ಮೇಲಿನಿಂದ ವಿಮಾನವೊಂದು ಬಂದಿಳಿಯಿತು. ಧರ್ಮದೇವನು ಅವರನ್ನು ವಿಮಾನದಲ್ಲಿ ಕುಳ್ಳಿರಿಸಿಕೊಂಡು ಅವರು ಪಡೆದುಕೊಂಡ ಲೋಕಕ್ಕೆ ಕರೆದುಕೊಂಡು ಹೋದನು.

ಈ ಕಥೆಯನ್ನು ಮುಂಗುಸಿಯೊಂದು ಯುಧಿಷ್ಠಿರನಿಗೆ ಹೇಳಿದ್ದು, ಅದು ಬ್ರಾಹ್ಮಣನ ಮನೆಯಲ್ಲಿ ಅತಿಥಿಯು ಊಟ ಮಾಡಿದ ಎಲೆಯ ಮೇಲೆ ಓಡಾಡಿದಾಗ ಅದರಲ್ಲಿ ಅಂಟಿಕೊಂಡಿದ್ದ ಹಿಟ್ಟಿನ ಒಂದೆರಡು ಕಣಗಳ ಸ್ಪರ್ಶದಿಂದ ಅದರ ಶರೀರದ ಅರ್ಧಭಾಗ ಬಂಗಾರವಾಗಿತ್ತು. ಉಳಿದ ಅರ್ಧ ಭಾಗವನ್ನೂ ಬಂಗಾರವಾಗಿ ಪರಿವರ್ತಿಸಿಕೊಳ್ಳಲು ಅದು ಅನೇಕ ಯಜ್ಞಗಳಿಗೆ ಹೋಗುತ್ತಿದ್ದ. ಈಗ ಯುಧಿಷ್ಠಿರನ ಅಶ್ವಮೇಧ ಯಾಗದಲ್ಲಿ ಬಂದ ಅತಿಥಿಗಳು ಊಟ ಮಾಡಿದ ಎಲೆಗಳ ಮೇಲೆ ಹೊರಳಾಡಿತು. ಆದರೂ ಉಳಿದ ಭಾಗ ಬಂಗಾರವಾಗಲಿಲ್ಲವಾಗಿ, ಅವನು ಮಾಡಿದ ಅನ್ನದಾನ ಬ್ರಾಹ್ಮಣನ ಅನ್ನದಾನಕ್ಕೆ ಸಮನಾಗಲಿಲ್ಲ. ಹಾಗಾಗಿ ಅವನು ಗರ್ವಪಡುವ ಕಾರಣವಿಲ್ಲ ಎಂದು ಹೇಳಿ ಹೊರಟು ಹೋಯಿತು.

## ಜ್ಞಾನ - ನುಡಿ

ಸ್ನೇಹ ಬದುಕಿನ ಅಮೂಲ್ಯ ನಿಧಿ. ಒಳ್ಳೆಯ ಸ್ನೇಹಿತರು ವರವಾಗುತ್ತಾರೆ. ಕೆಟ್ಟ ಸ್ನೇಹಿತರು ಶಾಪವಾಗುತ್ತಾರೆ. – **ಹಾ. ಮಾ. ನಾಯಕ**

## ಜ್ಞಾನ - ಗಾದೆ

- ನಾಲಾಯಿಟ್ ಪರಿಹಾರ ಮಾಂಪೆರೆ ಆಪಿನೆಕ್ಕ್ ಕತ್ತಿ ಅಗತ್ಯ ಇದ್ದಿ.
- ನಿದ್ರೆ ಬರ್ಪಿನಾಯೆಗ್ ಹಾಸಿಗೆ ಬುಡ್ಪಾಯಿಲೆಕ್ಕ ಆಂಡ್.
- ನೀರ್ ಇತ್ತ್ಂಡ ಊರು, ಪೊಂಜೋವು ಇತ್ತ್ಂಡ ಇಲ್ಲ್.

## ಜ್ಞಾನ - ನಗೆ

**ಪತ್ನಿ** : ರೀ ಚಿಕ್ಕವರಿದ್ದಾಗ ದೆವ್ವದ ವೇಷ ಹಾಕಿದ್ದಕ್ಕೆ ನನಗೆ ಸೆಕೆಂಡ್ ಪ್ರೈಜ್ ಬಂದಿತ್ತು!

**ಪತಿ** : ತಪ್ಪು ಮಾಡ್ಬಿಟ್ಟೆ, ವೇಷ ಹಾಕದೆ ಇದ್ದಿದ್ರೆ ಫಸ್ಟ್ ಪ್ರೈಜ್ ಬರ್ತಿತ್ತು!

## ಜ್ಞಾನ - ವಿಸ್ಮಯ

ಸಿಟ್ಟಿಗೆದ್ದ ವಯಸ್ಕ ಸಿಂಹ ಬಾಯ್ದೆರೆದು ಕೂಗು ಹಾಕಿತೆಂದರೆ ಸುತ್ತಲಿನ ಒಂದು ಕಿಲೋಮೀಟರ್ ವ್ಯಾಪ್ತಿಯವರೆಗೂ ಸ್ಪಷ್ಟವಾಗಿ ಕೇಳಿಸುವಂತಿರುತ್ತದೆ. ಹೀಗಾಗಿ ಸಿಂಹಗರ್ಜನೆ ಎಂದು ನುಡಿಗಟ್ಟಲ್ಲಿ ಬಳಸುತ್ತಾರೆ.




ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳ ಬೆಳಗಲಿ!
ಶುಭಾಶಯಗಳೊಂದಿಗೆ –

**G. K. KOLPE**
House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

## ಸ್ಥಾನಿಕ ಬ್ರಾಹ್ಮಣ ಮಹಾ ಮಂಡಲದಿಂದ ಗೌರವ ಅರ್ಪಣೆ



ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಕರ್ನಾಟಕ ಬ್ಯಾಂಕ್‌ನ ಅಧ್ಯಕ್ಷರಾಗಿ ನಿಯೋಜಿತಗೊಂಡ ಸ್ಥಾನಿಕ ಸಮಾಜದ ಶ್ರೀ ಪ್ರದೀಪ್ ಕುಮಾರ್ ಪಂಜ ಇವರನ್ನು ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ವತಿಯಿಂದ ಅಭಿನಂದಿಸಿ ಗೌರವಿಸಲಾಯಿತು. ಮಹಾಮಂಡಲದ ಅಧ್ಯಕ್ಷರಾದ ಶ್ರೀ ಎಂ. ದೇವಾನಂದ್ ಭಟ್ ಇವರ ಅಧ್ಯಕ್ಷತೆಯಲ್ಲಿ ಜರಗಿದ ಈ ಸಭೆಯಲ್ಲಿ ಬೆಳ್ತಂಗಡಿ ಶ್ರೀ ಬಿ. ಕೆ. ಧನಂಜಯ ರಾವ್, ಶ್ರೀ ಪ್ರದೀಪ್ ಕುಮಾರ್ ಅವರ ಬಗ್ಗೆ ಅಭಿನಂದನಾ ಭಾಷಣ ಮಾಡಿದರು. ಜೊತೆಗೆ ಮಹಾಮಂಡಲದ ಸದಸ್ಯತ್ವ ನೀಡಿ ನೋಂದಾಯಿಸಿಕೊಂಡ ಬಂಟ್ವಾಳ ಸಂಘ, ಅರ್ಚಕ ಪುರೋಹಿತ ಪರಿಪಾಲನಾ ಸಭಾದವರನ್ನು ಈ ಸಭೆಯಲ್ಲಿ ಅಭಿನಂದಿಸಲಾಯಿತು, ಸೇರಿದ ಅನೇಕ ಸಂಘ–ಸಂಸ್ಥೆಗಳವರು ಶ್ರೀ ಪ್ರದೀಪ್ ಕುಮಾರ್ ಪಂಜ ಅವರನ್ನು ಶಾಲು, ಸ್ಮರಣಿಕೆ ನೀಡಿ ಗೌರವಿಸಿದರು.

ಆ ಬಳಿಕ ಜರಗಿದ ಎಲ್ಲಾ ಸಂಘದ ಪ್ರತಿನಿಧಿಗಳ ಸಭೆಯಲ್ಲಿ ನಮ್ಮ ಸಮಾಜದ ದೇವಸ್ಥಾನಗಳ ಅಭಿವೃದ್ಧಿಯ ಬಗ್ಗೆ ಹಾಗೂ ಮುಂದಿನ ವರ್ಷ ಸಮಾವೇಶ ಜರಗಿಸುವ ಬಗ್ಗೆ ವಿಚಾರ ವಿನಿಮಯ ಮಾಡಲಾಯಿತು. ಈ ಸಭೆಯಲ್ಲಿ ಎಲ್ಲರನ್ನು ಸ್ವಾಗತಿಸಿದವರು ಮಂಡಲದ ಕಾರ್ಯದರ್ಶಿ ಡಾ। ವೈ. ಸುದರ್ಶನ್ ರಾವ್, ಮಂಡಲದ ಜೊತೆಕಾರ್ಯದರ್ಶಿ ನಿಟ್ಟೆ ಶ್ರೀ ಮುರಳೀಧರ ಶರ್ಮ ಕಾರ್ಯಕ್ರಮ ನಿರೂಪಿಸಿದ ಈ ಸಭೆಯಲ್ಲಿ ಭಾಗವಹಿಸಿ ಅಮೂಲ್ಯ ಸಲಹೆ ಸೂಚನೆ ನೀಡಿದ ಮಹಾಮಂಡಲದ ಎಲ್ಲ ಸದಸ್ಯರಿಗೆ ಮಂಡಲದ ಉಪಾಧ್ಯಕ್ಷರಾದ ಶ್ರೀ ಉದಯ ಬಾರ್ಕೂರು ಧನ್ಯವಾದ ಸಮರ್ಪಿಸಿದರು.

## ಭಜನಾ ಸ್ಪರ್ಧೆ – ಶ್ರೀ ಸುಬ್ರಹ್ಮಣ್ಯ ಸಭಾ ಸ್ಥಾನಿಕ ಬ್ರಾಹ್ಮಣ ಸಭಾ, ಬೆಳ್ತಂಗಡಿ – 'ವಿಪ್ರ ಭಜನಾ ಸಾಮ್ರಾಟ್'



ಶ್ರೀ ಸುಬ್ರಹ್ಮಣ್ಯ ಸಭಾ ಸ್ಥಾನಿಕ ಬ್ರಾಹ್ಮಣ ಸಭಾ, ಬೆಳ್ತಂಗಡಿ ಇವರು ನಡೆಸಿದ 'ವಿಪ್ರ ಭಜನಾ ಸಾಮ್ರಾಟ್' ಸ್ಪರ್ಧೆಯಲ್ಲಿ ಶ್ರೀ ಶಾರದಾಂಬಾ ಭಜನಾ ಮಂಡಳಿ ಸುಬ್ರಹ್ಮಣ್ಯ ಸಭಾದ ಗುರುಗಳು ಶ್ರೀ ಸುಬ್ಬ ರಾವ್ ಪೊಳಲಿ ಹಾರ್ಮೋನಿಯಂನಲ್ಲಿ, ತಬಲದಲ್ಲಿ ಶ್ರೀ ಕೃಷ್ಣರಾಜ್ ರಾವ್ ಹಾಗೂ ಭಜನೆಯಲ್ಲಿ ಶ್ರೀಮತಿ ಕುಸುಮಾ ನವೀನ್ ಕುಮಾರ್, ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ರಾವ್, ಶ್ರೀಮತಿ ವಲ್ಲಿ ಜ್ಞಾನೇಶ್, ಶ್ರೀಮತಿ ಸತ್ಯವತಿ ವಿಜಯಕುಮಾರ್, ಶ್ರೀಮತಿ ಸರೋಜಿನಿ ಎಸ್. ರಾವ್, ಶ್ರೀಮತಿ ಸುನೀತ ವಿಷ್ಣುಮೂರ್ತಿ, ಶ್ರೀಮತಿ ವಿಜಯ ಸುರೇಶ್, ಶ್ರೀ ಶ್ರೀನಿವಾಸ್ ರಾವ್ ಭಾಗವಹಿಸಿ ತೀರ್ಪುಗಾರರ ಮೆಚ್ಚುಗೆ ಗಳಿಸಿದರು. ಇವರೊಂದಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಸಹಕರಿಸಿದರು.


Follow us on :

**BUILDING DREAMS, ENHANCING LIVES**

Experience our Unique Projects at a Prime Localities of Mangalore

27 years of milestone | Land Trades Builders & Developers



*Premium Apartments , World Class amenities , Landscaped Garden, CRISIL 7 Star Rated Project*

SOLITAIRE
Experience the difference

*Hathill , Chilimbi*

Club House | High Rise Tower
2,3,4 & 5 BHK Luxury Homes

*Affordable Homes at Derebail , Mangalore*

HABITAT ONE 54
An Urban Lifestyle

1 & 2 BHK RESIDENCES
FROM ₹30 LAKHS (All Inclusive)





NEWLY LAUNCHED PROJECT

NAKSHATRA

*Gandhinagar , Mannagudda*

G+14 Storey | 50 Exclusive Apartments |
2&3 BHK Premium Homes

*Construction :* MFAR CONSTRUCTIONS

*Developers CRISIL Rating :* DA2

8882 777 444
Email :sales@landtrades.in

Corporate Office: Milestone25", 5th Floor, Collectors Gate Junction, Balmatta, Mangalore, Karnataka 575002 | +91 824 2425424, 2423866, 2445840

CREDAI MANGALORE



Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher :* Sri Harsha Kumar Kedige, President, Shree Subrahmanya Sabha (R.), Kodialbail, Mangalore - 3

*Editor :* Sri M. S. Raghunath Rao, Darbe, Puttur *Printed at :* Rajesh Power Press, Darbe - 574 202, Puttur, D. K.